ಬೆಲೆ ರೂ.2.50

D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಫೆಬ್ರವರಿ 2020

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ

ನಿಮ್ಮ ಮೊಬೈಲ್‌ಗೆ

STHANIKA

PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ

ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-20 ಸಂಚಿಕೆ-02 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಉಡುಪಿಯಲ್ಲಿ 30ನೇ ವರ್ಷದ ಶ್ರೀಶಾರದಾ ಟ್ರೋಫಿ





ಸತತವಾಗಿ ಪ್ರತೀ ವರ್ಷ ನಡೆದು ಕೊಂಡು ಬಂದ ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವು ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘಕ್ಕೆ ಹಿರಿಮೆಯನ್ನು ತಂದುಕೊಟ್ಟ ಕಾರ್ಯಕ್ರಮವಾಗಿದೆ. ಶಿಸ್ತುಬದ್ಧವಾಗಿ, ಅಚ್ಚುಕಟ್ಟಾಗಿ ನಡಸಿಕೊಂಡು 30ನೇ ವರ್ಷಕ್ಕೆ ತಲುಪಿದ ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವು ದಿನಾಂಕ 02-02-2020ರಂದು ಸ್ಥಳೀಯ ಎಂ.ಜಿ.ಎಂ ಕ್ರೀಡಾಂಗಣದಲ್ಲಿ ನೆರವೇರಿತು.

ಬೆಳಿಗ್ಗೆ 9 ಗಂಟೆಗೆ ಮುಖ್ಯಅತಿಥಿಗಳಾಗಿ ಆಗಮಿಸಿದ ಮಹಾರಾಷ್ಟ್ರ ಸರಕಾರದ ಲೋಕೋಪಯೋಗಿ ಇಲಾಖಾ ಇಂಜಿನಿಯರ್ ಶ್ರೀ ಉಮೇಶ್ ರಾವ್ ಜ್ಯೋತಿ ಬೆಳಗಿಸಿ ಪಂದ್ಯಾಟವನ್ನು ಉದ್ಘಾಟಿಸಿದರು. ಖ್ಯಾತ ನ್ಯಾಯವಾದಿ ಬೆಳ್ತಂಗಡಿ ಸ್ಥಾನಿಕ ಸಮಾಜದ ಅಧ್ಯಕ್ಷ ಶ್ರೀ ಧನಂಜಯ ರಾವ್ ಮತ್ತು ಪಡುಬಿದ್ರೆಯ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ಎಂ.ಕೆ. ಮೋಹನ್ ರಾವ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದು, ಆಗಮಿಸಿದ್ದ ತಂಡಗಳ ಪರಿಚಯ ಮಾಡಿಕೊಂಡರು. ರಾಜ್ಯ ಮಟ್ಟದ ಈ ಪಂದ್ಯಾಟದಲ್ಲಿ ಬೆಂಗಳೂರು, ಬೆಳ್ತಂಗಡಿ (ಎರಡು ತಂಡ), ಕುಂದಾಪುರ, ಬಾರ್ಕೂರು, ಪಡುಬಿದ್ರೆ, ಬಂಟ್ವಾಳ, ನಂದಳಿಕೆ (ಎರಡು ತಂಡ), ಮಂದಾರ್ತಿ, ಸುರತ್ಕಲ್ (ಎರಡು ತಂಡ), ಕಟಪಾಡಿ (ಎರಡು ತಂಡ) ಹೀಗೆ ಒಟ್ಟು 14 ತಂಡಗಳು ಭಾಗವಹಿಸಿದ್ದವು.

**ಉಪಾಹಾರ :** ಬೆಳಗಿನ ಉಪಾಹಾರವು ಎಂ.ಜಿ.ಎಂ. ಕ್ರೀಡಾಂಗಣಕ್ಕೆ ಶ್ರೀಶಾರದಾ ಮಂಟಪದಿಂದ ಒದಗಿಸಲಾಗಿದ್ದು, ಎಲ್ಲರೂ ಉಪಾಹಾರ ಸ್ವೀಕರಿಸಿದರು. ನಂತರ ಪ್ರಾರಂಭಗೊಂಡ ಪಂದ್ಯಗಳ ಮೂರು ಸುತ್ತಿನ ಆಟಗಳು ಭರದಿಂದ ನಡೆದವು. ಮಧ್ಯಾಹ್ನದ ಊಟದ ಮೊದಲು ಸೆಮಿಫೈನಲ್‌ವರೆಗಿನೆಲ್ಲಾ ಪಂದ್ಯಗಳೂ ಮುಕ್ತಾಯಗೊಂಡವು.

**ಮಧ್ಯಾಹ್ನದ ಊಟ :** ಊಟಕ್ಕಾಗಿ ಪಂದ್ಯಗಳಿಗೆ ವಿಶ್ರಾಂತಿ ನೀಡಲಾಯಿತು. ಶಾರದಾ ಮಂಟಪದಲ್ಲಿ ಎಲ್ಲ ಆಟಗಾರರಿಗೆ ಶುಚಿ-ರುಚಿಯಾದ ಊಟ ಸಿದ್ಧಗೊಂಡಿತ್ತು. ಅಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗಾಗಿ ಏರ್ಪಡಿಸಲಾಗಿದ್ದ ಒಳಾಂಗಣ ಕ್ರೀಡೆಗಳೂ ಮುಗಿದಿದ್ದು, ಎಲ್ಲರೂ ಜೊತೆಯಾಗಿ ಊಟವನ್ನು ಸ್ವೀಕರಿಸಿದರು.


**ಸೂಪರ್ ಓವರ್ :** ಸೆಮಿಫೈನಲ್ ಪಂದ್ಯಗಳಲ್ಲಿ ನಂದಳಿಕೆ ತಂಡವನ್ನು ಬೆಳ್ತಂಗಡಿ ತಂಡವೂ, ಎನ್.ಐ.ಟಿ.ಕೆ. ಸುರತ್ಕಲ್ ತಂಡವನ್ನು ಬೆಂಗಳೂರು ತಂಡವೂ ಮುಖಾಮುಖಿಯಾದವು. ಒಂದು

(3ನೇ ಪುಟಕ್ಕೆ...)

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಶ್ರೀ ಶಾರದಾ ದೇವಸ್ಥಾನದ ಕುಂಭಾಭಿಷೇಕದ ಆಮಂತ್ರಣ







ಭಕ್ತಾಭಿಮಾನಿಗಳೇ,

ತಾ.05-03-2020 ಹಾಗೂ 06-03-2020ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಕುಂಭಾಭಿಷೇಕವು ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಕೃಪಾಶೀರ್ವಾದಗಳೊಂದಿಗೆ ಹಾಗೂ ತತ್ಕರಕಮಲ ಸಂಜಾತರಾದ ಶ್ರೀ ಶ್ರೀ ವಿಧುಶೇಖರ ಭಾರತೀತೀರ್ಥ ಮಹಾಸ್ವಾಮಿಗಳವರ ಉಪಸ್ಥಿತಿಯೊಂದಿಗೆ ನೆರವೇರಲಿದೆ. ಶ್ರೀ ಶ್ರೀ ಗಳವರು ತಾ.05-03-2020ರಂದು ಸಂಜೆ ಶ್ರೀ ಶಾರದಾ ಮಂಟಪಕ್ಕೆ ಬಿಜಯಂಗೈಯಲಿದ್ದು ಅವರನ್ನು ಮೆರವಣಿಗೆ ಹಾಗೂ ಪೂರ್ಣಕುಂಭ ಸ್ವಾಗತದೊಂದಿಗೆ ಶ್ರೀ ಶಾರದಾ ಮಂಟಪಕ್ಕೆ ಕರೆತರಲಾಗುವುದು. ನಂತರ ಧೂಳಿಪಾದಪೂಜೆ, ಶ್ರೀ ಚಂದ್ರಮೌಳೀಶ್ವರರ ಪೂಜೆ ಹಾಗೂ ಶ್ರೀ ಶ್ರೀ ಗಳಿಂದ ಆಶೀರ್ವಚನ ಮತ್ತು ಶ್ರೀ ಶ್ರೀ ಗಳವರಿಗೆ ಆಸ್ತಿಕ ಬಂಧುಗಳಿಂದ ಗೌರವಾರ್ಪಣೆ ಕಾರ್ಯಕ್ರಮ ನೆರವೇರಲಿರುವುದು.

ತಾ.06-03-2020ರಂದು ಬೆಳಿಗ್ಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ಕುಂಭಾಭಿಷೇಕ ಪ್ರಯುಕ್ತ ಧಾರ್ಮಿಕ ವಿಧಿಗಳು ಆರಂಭಗೊಂಡು ಸುಮಾರು 11 ಗಂಟೆಗೆ ಶ್ರೀ ಶ್ರೀ ಗಳವರ ಅಮೃತ ಹಸ್ತದಿಂದ ಕುಂಭಾಭಿಷೇಕವು ನೆರವೇರಲಿದೆ. ಇದೇ ಸಂದರ್ಭದಲ್ಲಿ ಆಸ್ತಿಕ ಬಂಧುಗಳನ್ನು ಹಾಗೂ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರನ್ನು ಉದ್ದೇಶಿಸಿ ಶ್ರೀ ಶ್ರೀಗಳವರು ಆಶೀರ್ವಚನ ನೀಡಲಿರುವರು. ಅನ್ನಸಂತರ್ಪಣೆಯು ಮಧ್ಯಾಹ್ನ ನೆರವೇರಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀ ಶಾರದಾ ದೇವಿಯ ಹಾಗೂ ಜಗದ್ಗುರುಗಳವರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ವಿನಂತಿಸುತ್ತೇವೆ.

-ಆಡಳಿತ ಮಂಡಳಿ

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಮಹಾಶಿವರಾತ್ರಿಯ ಆಮಂತ್ರಣ



ಭಕ್ತಾಭಿಮಾನಿಗಳೇ,

ತಾ.21-02-2020, ಶುಕ್ರವಾರ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 8 ಗಂಟೆಯಿಂದ ರುದ್ರಾಭಿಷೇಕ, ಲಲಿತಾ ಸಹಸ್ರನಾಮ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಲಘು ಉಪಹಾರದೊಂದಿಗೆ ಪ್ರಸಾದ ವಿತರಣೆ ನಡೆಯಲಿದೆ.

ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

-ಆಡಳಿತ ಮಂಡಳಿ

# ವಿಶ್ವ ಸಮಾವೇಶ ಸಂಪನ್ನ






ಜಾಗತಿಕ ಮಟ್ಟದ ಸ್ಥಾನಿಕ ಬ್ರಾಹ್ಮಣರ ಸಂಘಗಳ ಹಾಗೂ ಸಂಪನ್ಮೂಲ ವ್ಯಕ್ತಿಗಳ ಒಕ್ಕೂಟವಾದ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ(ರಿ) ಹಾಗೂ ಬೆಂಗಳೂರಿನ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ವತಿಯಿಂದ ಬೆಂಗಳೂರಿನ ಕೋಡಿಗೆಹಳ್ಳಿಯ ಜ್ಞಾನಶಕ್ತಿ ಮಂಟಪದಲ್ಲಿ ತಾ 11-01-2020 ಹಾಗೂ 12-01-2020ರಂದು ಎರಡು ದಿನಗಳ ವಿಶ್ವ ಸಮಾವೇಶ ಅದ್ದೂರಿಯಾಗಿ ನೆರವೇರಿತು. ಕುಂದಾಪುರ, ಉಡುಪಿ, ಪಡುಬಿದ್ರೆ, ಸುರತ್ಕಲ್, ಮಂಗಳೂರು, ಕಾಸರಗೋಡು, ಬೆಳ್ತಂಗಡಿ, ಕಾರ್ಕಳ, ಮೂಡಬಿದ್ರೆ, ಪುತ್ತೂರು, ಕಡಬ, ಸುಳ್ಯ, ಮೈಸೂರು, ಮುಂಬಯಿ, ಹಾಗೂ ಅಮೇರಿಕಾದಿಂದ ನಮ್ಮ ಸಂಘಗಳ ಪ್ರತಿನಿಧಿಗಳು ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಸಮಾಜಬಾಂಧವರು ಭಾಗವಹಿಸಿ ಈ ಕಾರ್ಯಕ್ರಮವನ್ನು ಅಭೂತಪೂರ್ವವೆನಿಸುವಂತೆ ಯಶಸ್ವಿಗೊಳಿಸಿದರು.

ತಾ.11-01-2020ರ ಶನಿವಾರ ಬೆಳಗ್ಗೆ 8-30ಕ್ಕೆ ಸರಿಯಾಗಿ ಬೆಂಗಳೂರು ಸಂಘದ ವತಿಯಿಂದ ಶ್ರೀ ವೈ.ಶ್ರೀನಿವಾಸ ರಾವ್ ಇವರ ಸಂಯೋಜನೆಯ ಮಕ್ಕಳ ಚಿಲಿಪಿಲಿ ವಾದ್ಯಗೋಷ್ಠಿಯೊಂದಿಗೆ ಮುಂಜಾನೆಯ ಕಾರ್ಯಕ್ರಮಗಳು ಸಭಾಂಗಣದಲ್ಲಿ ಆರಂಭಗೊಂಡವು. ಅದಕ್ಕೂ ಮೊದಲು ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವೈದಿಕ ಶಿಬಿರ( ಸಂಧ್ಯಾವಂದನೆ ಕಲಿಕೆ), ಗಣಹೋಮ ನೆರವೇರಿತು. ನಂತರ ದೇವಸ್ಥಾನದಲ್ಲಿ ಮಹಾಪೂಜೆಯಾಗಿ ಸಮಾಜಬಾಂಧವರು ಕಾರ್ಯಕ್ರಮದ ಯಶಸ್ಸಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಸುಮಾರು 9-00 ಗಂಟೆಯ ಸಮಯದಲ್ಲಿ ಹೆಬ್ಬೂರು ಕೋದಂಡಾಶ್ರಮ ಮಠದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರು ಆಗಮಿಸಿದರು. ಅವರನ್ನು ರಥದಲ್ಲಿ ಕುಳ್ಳಿರಿಸಿ ಪೂರ್ಣಕುಂಭಸ್ವಾಗತ ವೇದಘೋಷ, ಮಂಗಳ ವಾದ್ಯ, ವೀರಗಾಸೆ ಕುಣಿತ ಇತ್ಯಾದಿಗಳೊಂದಿಗೆ ಮೆರವಣಿಗೆಯಲ್ಲಿ ದೇವಳಕ್ಕೆ ಕರೆತರಲಾಯಿತು. ಮೊತ್ತಮೊದಲಾಗಿ ಸ್ವಾಮೀಜಿಯವರು ಗೋಪೂಜೆಯನ್ನು ನೆರವೇರಿಸಿ ನಂತರ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿಗೆ ಮಂಗಳಾರತಿ ಅರ್ಪಿಸಿದರು. ಸುಮಾರು ಹತ್ತು ಗಂಟೆಗೆ ಉದ್ಘಾಟನಾ ಸಮಾರಂಭ ಆರಂಭವಾಯಿತು. ಈ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀ ದಿನೇಶ್ ಗುಂಡೂರಾವ್, ಕರ್ನಾಟಕ ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಶ್ರೀಮತಿ ಜಿ.ರಶ್ಮಿ, ಕರ್ನಾಟಕ ಸರಕಾರದ ನಿವೃತ್ತ ಕಾರ್ಯದರ್ಶಿ(ಲೋಕೋಪಯೋಗಿ ಇಲಾಖೆ)ಗಳಾದ ಶ್ರೀ ವೈ.ಉಮೇಶ ರಾವ್, ಕೆನ್ನಮೆಟಲ್ ಬೆಂಗಳೂರು ಇದರ ಮುಖ್ಯಸ್ಥರಾದ ಶ್ರೀ ಭಾಗ್ಯಚಂದ್ರ ರಾವ್, ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಸ್ಥಾಪಕಾಧ್ಯಕ್ಷರಾದ ಶ್ರೀ ಸಿ.ಎಸ್.ರಾವ್, ಶ್ರೀಕ್ಷೇತ್ರ ಧರ್ಮಸ್ಥಳದ ಪಾರುಪತ್ಯದಾರರಾದ ಶ್ರೀ ಪಿ.ಲಕ್ಷ್ಮೀನಾರಾಯಣ ರಾವ್ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಗಳು ಸಮಾವೇಶವನ್ನು ದೀಪಬೆಳಗಿಸಿ ಉದ್ಘಾಟಿಸಿದರು. ನಂತರ ಅವರು ಸಮಾಜಬಾಂಧವರಿಗೆ ಆಶೀರ್ವಚನ ನೀಡುತ್ತಾ ನೈತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳುವಂತೆ ಹಾಗೂ ಸಂಧ್ಯಾವಂದನಾದಿ ನಿತ್ಯಾನುಷ್ಠಾನಗಳನ್ನು ಎಂದೆಂದಿಗೂ ಪಾಲಿಸುವಂತೆ ಹಿತವಚನವಿತ್ತರು. ನಂತರ ಉಡುಪಿಯ ಡಾ। ವೈ.ಸುದರ್ಶನ ರಾವ್ ಇವರು ಸಂಪಾದಿಸಿದ ಸ್ಥಾನಿಕ ಬ್ರಾಹ್ಮಣರು ಪರಂಪರಾಗತ ಆಡಳಿತಗಾರರಾಗಿ ಸೇವೆ ಸಲ್ಲಿಸುತ್ತಿರುವ ಒಟ್ಟು ಮೂವತ್ತೈದು ದೇವಸ್ಥಾನಗಳ ಛಾಯಾಚಿತ್ರ ಸಹಿತ ಪರಿಚಯ ನೀಡುವ ಪುಸ್ತಕ "ಅಸ್ಮಿತೆ"ಯನ್ನು ಶ್ರೀ ಭಾಗ್ಯಚಂದ್ರ ರಾವ್ ಬಿಡುಗಡೆಗೊಳಿಸಿದರು. ನಂತರ ಅಖಿಲ ಭಾರತ ಬ್ರಾಹ್ಮಣ ಸಭಾ ಬೆಂಗಳೂರು ಇವರ ನೂತನ ಯೋಜನೆ, ಶ್ರೀ ವಿದ್ಯಾರಣ್ಯ ಕೊಳ್ಳಿಪಾಲು ಇವರ ನೇತೃತ್ವದಲ್ಲಿ ರೂಪುಗೊಂಡ , ಯುವಜನರಿಗೆ ಉದ್ಯೋಗ ಪಡೆದುಕೊಳ್ಳಲು ಹಾಗೂ ತಾವು ಕೈಗೊಂಡಿರುವ ಉದ್ಯೋಗದಲ್ಲಿ ಇನ್ನೂ ಹೆಚ್ಚಿನ ಯಶಸ್ಸನ್ನು ಕಾಣಲು ಮಾರ್ಗದರ್ಶನವೀಯುವ "ಉದ್ಯೋಗದೀಪಿಕಾ" ಎಂಬ ನೂತನ ಯೋಜನೆಯನ್ನು ಅಖಿಲ ಭಾರತ ಬ್ರಾಹ್ಮಣ ಸಭಾ ಇದರ ಮಾಜಿ ಅಧ್ಯಕ್ಷರಾದ ಶ್ರೀ ಅಜ್ಜಾವರ ಶಿವರಾವ್ ನೆರವೇರಿಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಪಾರುಪತ್ಯಗಾರರಾದ ಶ್ರೀ ಪಿ.ಲಕ್ಷ್ಮೀನಾರಾಯಣರಾಯರನ್ನು ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು, ಸಮ್ಮೇಳನಾಧ್ಯಕ್ಷರಾದ ಶ್ರೀ ರವೀಂದ್ರನಾಥ್ ಬೆಳ್ಳೆ ಹಾಗೂ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಎನ್.ಕೆ.ಜಗನ್ನಿವಾಸ ರಾವ್ ಮಾತನಾಡಿ ಸಮ್ಮೇಳನದ ಹಾಗೂ ಮಹಾಮಂಡಲದ ಉದ್ದೇಶಗಳನ್ನು ವಿವರಿಸಿದರು. ಮಹಾಮಂಡಲದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎಂ.ಆರ್.ವಾಸುದೇವ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಅಂದು ಬೆಂಗಳೂರು, ಮೈಸೂರು, ಪುತ್ತೂರು, ಮೂಡಬಿದರೆ ಮುಂಬಯಿ, ಕಾಸರಗೋಡು, ಕುಂದಾಪುರ, ಬೆಳ್ತಂಗಡಿ ಸಂಘಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರದರ್ಶನಗೊಂಡವು. "ಆಚಾರ್ಯ ಶಂಕರರು ಹಾಗೂ ಅದ್ವೈತ" ಮತ್ತು "ಸಾಮಾಜಿಕ ಸ್ವಾಸ್ಥ್ಯದಲ್ಲಿ ಮಹಿಳೆಯರ ಪಾತ್ರ" ಎಂಬ ಎರಡು ವಿಷಯಗಳ ಬಗ್ಗೆ ವಿಚಾರಗೋಷ್ಠಿ ನಡೆಯಿತು. ಸಂಜೆ ಕಾಸರಗೋಡಿನ ಗೋಪಾಲಕೃಷ್ಣ ಬೊಂಬೆಯಾಟ ತಂಡದವರಿಂದ "ನರಕಾಸುರ ವಧೆ" ಎಂಬ ಬೊಂಬೆಯಾಟವೂ ನಂತರ ಶ್ರೀ ಎಂ.ದೇವಾನಂದ ಭಟ್‌ರವರ ಸಂಯೋಜನೆಯಲ್ಲಿ ಮಹಿಷಮರ್ದಿನಿ ಎಂಬ ಯಕ್ಷಗಾನವೂ ನೆರವೇರಿತು.

ತಾ.12-01-2020ರಂದು ರವಿವಾರ ಬೆಳಗ್ಗೆ ದೇವಸ್ಥಾನದಲ್ಲಿ ವೈದಿಕ ಶಿಬಿರ, ಸತ್ಯನಾರಾಯಣ ಪೂಜೆ, ಶಂಕರ ಅಷ್ಟೋತ್ತರ, ರುದ್ರಪಾರಾಯಣ ಇತ್ಯಾದಿ ಧಾರ್ಮಿಕ ಚಟುವಟಿಕೆಗಳು ನಡೆದವು. ಮಂಗಳೂರು, ಮೂಡಬಿದರೆ, ಮೈಸೂರು, ಉಡುಪಿ, ಸುಳ್ಯ, ಕಾರ್ಕಳ, ಪಡುಬಿದ್ರೆ, ಸುರತ್ಕಲ್ ಸಂಘಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. "ಸ್ಥಾನಿಕರ ಸಾಮಾಜಿಕ ಮತ್ತು ಸಂಸ್ಕೃತಿಯ ಸವಾಲುಗಳು", "ಸನಾತನ ಸಂಸ್ಕೃತಿಗೆ ಯುವಪೀಳಿಗೆಯ ಕೊಡುಗೆ", "ಸ್ಥಾನಾಚಾರ್ಯರ ಅಸ್ತಿತ್ವ ಮತ್ತು ಅಸ್ಮಿತೆ" ಎಂಬ ವಿಷಯಗಳ ಬಗ್ಗೆ ವಿಚಾರಗೋಷ್ಠಿ ನಡೆದವು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಶ್ರೀ ಅಶೋಕ ಹಾರನಹಳ್ಳಿ ಹಾಗೂ ಡಿಫೆನ್ಸ್ ಫುಡ್ ಆ್ಯಂಡ್ ರೀಸರ್ಚ್ ಲ್ಯಾಬೋರೇಟರಿ, ಮೈಸೂರು ಇದರ ನಿವೃತ್ತ ಡೈರೆಕ್ಟರ್ ಡಾ. ಕೋಲ್ಲೆ ರಾಧಾಕೃಷ್ಣ ರಾವ್ ಅತಿಥಿಗಳಾಗಿ ಆಗಮಿಸಿದ್ದರು. ಸಮ್ಮೇಳನಾಧ್ಯಕ್ಷರಾದ ಶ್ರೀ ರವೀಂದ್ರನಾಥ ಬೆಳ್ಳೆ ದಂಪತಿಗಳನ್ನು "ಸ್ಥಾನಿಕ ರತ್ನ" ಪ್ರಶಸ್ತಿ ಸಲ್ಲಿಸಿ ಸನ್ಮಾನಿಸಲಾಯಿತು. ನಮ್ಮ ಸಮಾಜದ ಹಿರಿಯ ಹಾಗೂ ಕಿರಿಯ ಸಾಧಕರನ್ನು ಅವರು ಸಾಧನೆಗೈದ ಕ್ಷೇತ್ರಗಳ ಪ್ರಕಾರ ಗುರುತಿಸಿ ಸನ್ಮಾನಿಸಲಾಯಿತು. ವೇದಮೂರ್ತಿ ವಾಗೀಶ ಶಾಸ್ತ್ರಿಗಳು ಶುಭಾಶಂಸನೆಯಿತ್ತರು. ಶ್ರೀ ಅನು ಮೂಡುಬೆಳ್ಳೆ ಹಾಗೂ ಸುಕುಮಾರ ಆಲಂಪಾಡಿ ಎರಡು ದಿನಗಳ ಕಾರ್ಯಕಲಾಪಗಳ ಅವಲೋಕನೆಯ ವಿಮರ್ಶೆಯನ್ನಿತ್ತರು. ಬೆಂಗಳೂರು ಸಂಘದ ಕಾರ್ಯದರ್ಶಿ ಶ್ರೀ ಕೃಷ್ಣಾನಂದ ಸ್ವಾಗತಿಸಿ ಶ್ರೀ ದೇವಾನಂದ ಭಟ್ ಧನ್ಯವಾದವಿತ್ತರು. ಎರಡೂ ದಿನಗಳಂದು ಸಭಾಂಗಣದ ನೆಲಮಹಡಿಯಲ್ಲಿ ವಿವಿಧ ಮಳಿಗೆಗಳು, ಪುಸ್ತಕ ಪ್ರದರ್ಶನ ಹಾಗೂ ಚರುಮುರಿ, ಗೋಳಿಭಜೆ, ಮತ್ತು ಲಿಂಬು ಸೋಡಾದ ಅಂಗಡಿಗಳು ಸಮಾವೇಶಕ್ಕೆ ಜಾತ್ರೆಯ ಮೆರುಗು ನೀಡಿದವು. ಮೂರೂಹೊತ್ತು ಅಚ್ಚುಕಟ್ಟಾದ ಭೋಜನದ ವ್ಯವಸ್ಥೆಯನ್ನು ಬೆಂಗಳೂರು ಸಂಘದ ಕಾರ್ಯಕರ್ತರು ನಿರ್ವಹಿಸಿದರು. ಸಮಾವೇಶಕ್ಕೆ ಧನಸಹಾಯವಿತ್ತವರಿಗೆ ಶ್ರೀ ನಂದಿಕೂರು ಜನಾರ್ಧನರಾಯರು ಉಡುಗೊರೆಯನ್ನೂ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣರಾವ್ ಜ್ಯೋತಿಷ್ಯ ಸ್ಮಾರಕ ಟ್ರಸ್ಟ್ ನ ವತಿಯಿಂದ "ಅಸ್ಮಿತೆ" ಪುಸ್ತಕವನ್ನೂ ನೀಡಲಾಯಿತು. ಕೊನೆಯಲ್ಲಿ ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಸಂಘ ಉಡುಪಿ ಇವರ ಚಂದ್ರಹಾಸ ಚರಿತ್ರೆ ಯಕ್ಷಗಾನ ಪ್ರದರ್ಶನದೊಂದಿದೆ ಎರಡು ದಿನಗಳ ಉತ್ಸವಕ್ಕೆ ತೆರೆ ಬಿದ್ದಿತು.



ಸ್ಥಾನಿಕ ರತ್ನ ಪ್ರಶಸ್ತಿಗೆ ಭಾಜನರಾದ ಶ್ರೀ ರವೀಂದ್ರನಾಥ್ ಬೆಳ್ಳೆ ಹಾಗೂ ಮಾಲಿನಿ ದಂಪತಿಗಳನ್ನು ತುಂಬಿದಸಭೆಯಲ್ಲಿ ಸಮಾಜಬಾಂಧವರ ಹರ್ಷಘೋಷದೊಂದಿಗೆ ಅಭಿನಂದನಾ ಪತ್ರ, ಹಾರ, ಫಲಪುಷ್ಪ, ಸ್ಮರಣಿಕೆಗಳನ್ನಿತ್ತು ಗೌರವಿಸಲಾಯಿತು




ಡಾ ವೈ ಸುದರ್ಶನರಾವ್ ಸಂಪಾದಿಸಿರುವ ನಮ್ಮವರು ಆಡಳಿತಗಾರರಾಗಿರುವ ದೇವಸ್ಥಾನಗಳ ಪರಿಚಯ ಪುಸ್ತಕ ಅಸ್ಮಿತೆಯನ್ನು ಕೆನ್ನಮೆಟಲ್ ಬೆಂಗಳೂರು ಇದರ ಮುಖ್ಯಸ್ಥರಾದ ಶ್ರೀ ಭಾಗ್ಯಚಂದ್ರರಾವ್ ಬಿಡುಗಡೆಗೊಳಿಸಿದರು. ಎಂಟನೆಯ ಶತಮಾನಕ್ಕಿಂತಲೂ ಹಿಂದಿನ ದೇವಸ್ಥಾನಗಳು ನಮ್ಮವರ ಆಡಳಿತದಲ್ಲಿರುವುದು ಈ ಪುಸ್ತಕದಲ್ಲಿ ದಾಖಲಾಗಿದೆ.

## ಉಡುಪಿಯಲ್ಲಿ 30ನೇ ವರ್ಷದ ಶ್ರೀ ಶಾರದಾ ಟ್ರೋಫಿ

■...1ನೇ ಪುಟದಿಂದ

ಪಂದ್ಯದಲ್ಲಿ ಬೆಳ್ತಂಗಡಿ ತಂಡವು ವಿಜಯಿಯಾದರೆ ಇನ್ನೊಂದು ಪಂದ್ಯವು ಕೊನೆಯವರೆಗೂ ರೋಚಕಗೊಂಡು "ಟೈ" ಯಾಯಿತು. ಅದಕ್ಕಾಗಿ ಆಡಲಾದ 'ಸೂಪರ್ ಓವರ್'ನಲ್ಲಿ ಬೆಂಗಳೂರು ತಂಡವು ಜಯಗಳಿಸಿತು.

**ಫೈನಲ್ ಕಾದಾಟ :** ಶ್ರೀಶಾರದಾ ಟ್ರೋಫಿ ಫೈನಲಿಸ್ಟ್‌ಗಳಾಗಿ ಹೊರಹೊಮ್ಮಿದ್ದ ಬೆಳ್ತಂಗಡಿ ಹಾಗೂ ಬೆಂಗಳೂರು ತಂಡಗಳು ಸಂಜೆಯ ಇಳಿಹೊತ್ತಿನಲ್ಲಿ ತಮ್ಮನ್ನು ಸ್ಪರ್ಧೆಗೆ ಒಡ್ಡಿಕೊಂಡವು. ಪ್ರಾರಂಭದಲ್ಲಿ ಫೈನಲ್ ಪಂದ್ಯಕ್ಕೆ 8 ಓವರ್‌ಗಳೆಂದು ಘೋಷಿಸಿದ್ದರೂ ಸಮಯದ ಅಭಾವದಿಂದ ಎರಡೂ ತಂಡಗಳನ್ನು ವಿನಂತಿಸಿಕೊಂಡು 6 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಟಾಸ್ ಗೆದ್ದ ಬೆಂಗಳೂರು ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡು 6 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 57 ರನ್ನುಗಳನ್ನು ಗಳಿಸಿ ಬೆಳ್ತಂಗಡಿ ತಂಡಕ್ಕೆ ಗೆಲ್ಲಲು 58 ರನ್ನುಗಳ ಸವಾಲನ್ನು ನೀಡಿತು. ಆದರೆ ಬೆಳ್ತಂಗಡಿ ತಂಡವು ಕೇವಲ 3.2 ಓವರ್‌ಗಳಲ್ಲಿ ತಮ್ಮ ಯಾವುದೇ ವಿಕೆಟ್ ಕಳೆದುಕೊಳ್ಳದೆ 62ರನ್ನು ಗಳಿಸಿ ವಿಜಯದ ಗುರಿ ತಲುಪಿ ಶ್ರೀಶಾರದಾ ಟ್ರೋಫಿ–2020ನ್ನು ತಮ್ಮದಾಗಿಸಿಕೊಂಡಿತು.

**ಸಮಾರೋಪ ಸಮಾರಂಭ :** ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಅಂದಿನ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ವೈದ್ಯರಾದ ಡಾ| ಅನಿಲ್ ಕುಮಾರ್ ಬೈಕಾಡಿ, ಕುಂಜಿಬೆಟ್ಟು ವಾರ್ಡಿನ ನಗರಸಭಾ ಸದಸ್ಯ ಶ್ರೀ ಗಿರೀಶ್ ಅಂಚನ್ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ ಶುಭ ಹಾರೈಸಿದರು. ಬಹುಮಾನಗಳ ಪ್ರಾಯೋಜಕರಾದ ಶ್ರೀ ವೈ.ಭುವನೇಂದ್ರ ರಾವ್, ಶ್ರೀ ಬಿ.ಜಯರಾಮ ರಾವ್, ಹಾಗೂ ಶ್ರೀಮತಿ ಸುನಂದ ಸಿ.ಎಸ್.ರಾವ್, ಯುವ ವೇದಿಕೆಯ ಸಂಚಾಲಕರಾದ ಡಾ| ಸಂತೋಷ್ ರಾವ್ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್ ಸ್ವಾಗತಿಸಿದರು. ನಿರ್ದೇಶಕ ಶ್ರೀ ಕೃಷ್ಣಮೂರ್ತಿ ಬ್ರಹ್ಮಾವರ ವಿಜೇತರ ಪಟ್ಟಿ ವಾಚಿಸಿದರು. ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ವಂದನಾರ್ಪಣೆ ಮಾಡಿದರು. ನಿರ್ದೇಶಕ ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ನಿರೂಪಿಸಿದ್ದರು. ಶ್ರೀ ಅಲೆವೂರು ಶ್ಯಾಮರಾಯರು ಪ್ರಥಮ ಸ್ಥಾನ ಪಡೆದು ವಿಜೇತರಾದ ತಂಡಕ್ಕೆ ನಗದು ಪುರಸ್ಕಾರವನ್ನು ಪ್ರಾಯೋಜಿಸಿದ್ದರು.

**ಉಡುಪಿಯಲ್ಲಿ ಸ್ಥಾನಿಕ ಯುವ ಶಕ್ತಿಯ ಕೊರತೆ :** ಕಳೆದ 30 ವರ್ಷಗಳಿಂದ ಸತತವಾಗಿ ನಡೆದುಕೊಂಡು ಬರುತ್ತಿದ್ದ ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟಕ್ಕೆ ಸುಮಾರು 15 ದಿನಗಳ ಮೊದಲೇ ಸಾಕಷ್ಟು ಸಿದ್ಧತೆಗಳನ್ನು ನಡೆಸಬೇಕಾಗಿದ್ದು, ಈ ಎಲ್ಲಾ ಕೆಲಸಗಳನ್ನು ಈ ಹಿಂದೆ ಯಾರೆಲ್ಲಾ ಮಾಡುತ್ತಿದ್ದರೋ ಅವರೇ ಮುಂದುವರಿಸಿಕೊಂಡು ಹೋಗಬೇಕಾದ ಅನಿವಾರ್ಯತೆ ಹೆಚ್ಚಾಗುತ್ತಿದೆ. ಯುವ ವೇದಿಕೆ ಇದ್ದರೂ ಅದರಲ್ಲಿರುವ ಪದಾಧಿಕಾರಿಗಳು ಹೊರತುಪಡಿಸಿ ಉಳಿದ ಯುವ ಸಮೂಹ ಬೆಳಕಿಗೆ ಬಾರದೆ ಇರುವುದು ಕಂಡುಬರುತ್ತದೆ. ಪ್ರಾಮುಖ್ಯವಾಗಿ ಪಂದ್ಯಾಟದ ಹಿಂದಿನ ದಿನ ಕ್ರೀಡಾಂಗಣದಲ್ಲಿ ಪಿಚ್ ತಯಾರಿ, ಸುಣ್ಣ ಬಣ್ಣಗಳ ಅಲಂಕಾರದಂತಹ ಕಠಿಣ ಕೆಲಸಗಳನ್ನು ಸಮಾಜದ ಹಿರಿಯ ನಾಗರಿಕರೇ ನಿರ್ವಹಣೆ ಮಾಡಿದ್ದು, ಮುಂದಿನ ದಿನಗಳಲ್ಲಿ ಇಂತಹ ಜವಾಬ್ದಾರಿಯುತ ಕೆಲಸಗಳು ಹೇಗೆ ನಡೆಯಬಹುದೆಂದು ಚಿಂತಿಸಬೇಕಾದ ಅಗತ್ಯವಿದೆ. ಕಳೆದ 29 ವರ್ಷಗಳ ಶ್ರೀಶಾರದಾ ಟ್ರೋಫಿ ಪಂದ್ಯಾಟದಲ್ಲಿ ಉಡುಪಿ ಸಂಘದ ತಂಡವೂ ಭಾಗವಹಿಸಿದ್ದು ಹಲವು ವರ್ಷಗಳ ಕಾಲ ವಿಜಯೀ ಟ್ರೋಫಿಯೊಂದಿಗೆ ಸಂಭ್ರಮಿಸಿದೆ. ಈ ವರ್ಷ ಉಡುಪಿಯ ತಂಡವೂ ಇಲ್ಲ; ಯುವಕರೂ ಕಂಡುಬಂದದ್ದು ಬಹಳ ಕಡಿಮೆ. ಇದರ ಜೊತೆಯಲ್ಲಿ ಪ್ರತೀ ವರ್ಷ 10ನೇ ತರಗತಿಯ ಒಳಗಿನ ಮಕ್ಕಳಿಗಾಗಿ ನಡೆಸುವ ಕ್ರಿಕೆಟ್ ಪಂದ್ಯಕ್ಕೆ ಕೇವಲ ಬೆರಳೆಣಿಕೆಯ ಮಕ್ಕಳು ಮಾತ್ರ ಹೆಸರನ್ನು ನೋಂದಾಯಿಸಿದ್ದು ಬೇಸರದ ವಿಚಾರ. ಈ ಬಗ್ಗೆ ನಾವು ನೀವು ಚಿಂತನೆ ಮಾಡಬೇಕಾದ ಸಂದರ್ಭ ಒದಗಿಬಂದಿದೆ.

**ನಿರ್ಲಿಪ್ತ ತೀರ್ಪುಗಾರರು :** ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟಕ್ಕೆ ಪ್ರತಿ ವರ್ಷದಂತೆ ನಿರ್ಲಿಪ್ತ ಅಂಪೈರ್‌ಗಳು ಕಾರ್ಯನಿರ್ವಹಿಸಿದರು. ಮೂಳೂರು ಯು.ಬಿ.ಎಂ.ಸಿ. ಪ್ರೌಢ ಶಾಲಾ ದೈಹಿಕಶಿಕ್ಷಣ ಶಿಕ್ಷಕ ಶ್ರೀ ಪ್ರವೀಣ್ ಕುಮಾರ್, ಕುದಿ ವಿಷ್ಣುಮೂರ್ತಿ ಪ್ರೌಢ ಶಾಲಾ ದೈಹಿಕ ಶಿಕ್ಷಕ ಶ್ರೀ ಉಮೇಶ್, ಮಣಿಪಾಲ ಮಾಹೆಯ ಶ್ರೀ ಸದಾಶಿವ್, ಮತ್ತು ಶ್ರೀ ಭವಿತ್, ಮಣಿಪಾಲದ ಶ್ರೀ ಅನುರಾಗ್, ಯಶ್, ಕಿರಣ್ ಮತ್ತು ನಿತಿನ್ ಮೊದಲಾದವರು ತೀರ್ಪುಗಾರರಾಗಿ ಸಹಕರಿಸಿದ್ದರು. ಪ್ರವೀಣ್ ಕುಮಾರ್ ನಂದಳಿಕೆ, ಕೃಷ್ಣಾನಂದ ಇನ್ನಂಜೆ, ವಿಶ್ವನಾಥ್ ಶ್ಯಾನುಭಾಗ್ ಮೊದಲಾದವರು ಪಂದ್ಯಾಟಗಳು ಕ್ಲಪ್ತಸಮಯದಲ್ಲಿ ಮುಕ್ತಾಯಗೊಳ್ಳುವಂತೆ ವ್ಯವಸ್ಥೆಗೊಳಿಸಿದ್ದರು.

**ಕೃತಜ್ಞತಾರ್ಪಣೆ :** ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟಕ್ಕೆ ನಗದು ಬಹುಮಾನಗಳ ಕೊಡುಗೆ ನೀಡಿದ ಪ್ರಾಯೋಜಕರಿಗೆ, ಧನ ಸಹಾಯ ನೀಡಿದ ಸಮಾಜ ಬಂಧುಗಳಿಗೆ ಮತ್ತು ಸಂಸ್ಥೆಗಳಿಗೆ, ಬೇರೆ ಬೇರೆ ಊರುಗಳಿಂದ ಆಗಮಿಸಿದ ತಂಡ ಹಾಗೂ ಸಮಾಜಬಾಂಧವರಿಗೆ, ನಮ್ಮೊಂದಿಗೆ ದುಡಿದ ನಿರ್ಲಿಪ್ತ ಅಂಪೈರ್‌ಗಳಿಗೆ ಸಹಕರಿಸಿದ ಎಲ್ಲ ಸಮಾಜ ಬಾಂಧವರಿಗೆ, ಪ್ರತ್ಯಕ್ಷ ಹಾಗೂ ಪರೋಕ್ಷ ಸಹಾಯ ಮಾಡಿದ ಎಲ್ಲರಿಗೂ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ(ರಿ.) ಇದರ ಆಡಳಿತ ಮಂಡಳಿ ಹಾಗೂ ಕಾರ್ಯಕಾರಿ ಮಂಡಳಿಯು ಅನಂತ ಕೃತಜ್ಞತೆ ಸಲ್ಲಿಸುತ್ತದೆ.

**ವರದಿ : ಕೃಷ್ಣಕುಮಾರ್ ರಾವ್, ಮಟ್ಟು**



### ಶ್ರೀಶಾರದಾ ಟ್ರೋಫಿ ಬಹುಮಾನಗಳ ಪ್ರಾಯೋಜಕರು :

1. **ಶ್ರೀ ಅಲೆವೂರು ಶ್ಯಾಮರಾವ್ ದಂಪತಿಗಳು**
   **ತಮ್ಮ ಮಾತಾ ಪಿತೃಗಳಾದ ದಿ| ಭುಜಂಗ ರಾವ್ ಮತ್ತು ದಿ| ಶಾಂತಾ ಇವರ ಸ್ಮರಣಾರ್ಥ**
   (ವಿಜೇತ ತಂಡಕ್ಕೆ ನಗದು ಪುರಸ್ಕಾರ)
2. **ಶ್ರೀಮತಿ ಸುನಂದಾ ಸಿ.ಎಸ್.ರಾವ್, ಚಿಟ್ಪಾಡಿ**
   (ರನ್ನರ್ಸ್ ಅಪ್ ತಂಡಕ್ಕೆ ನಗದು ಪುರಸ್ಕಾರ)
3. **ಶ್ರೀ ವೈ.ಭುವನೇಂದ್ರ ರಾವ್**
   **ತಮ್ಮ ಮಾತಾ ಪಿತೃಗಳಾದ ದಿ| ಎಲ್ಲೂರು ಲಕ್ಷ್ಮೀನಾರಾಯಣರಾವ್ ಜೋತಿಷ್ಕರು ಮತ್ತು ದಿ| ಗಿರಿಜಮ್ಮ ಇವರ ಸ್ಮರಣಾರ್ಥ**
   (ಸೆಮಿಫೈನಲ್ ಕಳಕೊಂಡ ತಂಡಗಳಿಗೆ ನಗದು ಪುರಸ್ಕಾರ)
4. **ಶ್ರೀ ಬಿ.ಜಯರಾಮ ರಾವ್ ಉಡುಪಿ**
   (ಉತ್ತಮ ಬೌಲರ್, ಉತ್ತಮ ಬ್ಯಾಟ್ಸ್‌ಮ್ಯಾನ್, ಉತ್ತಮ ಆಲ್‌ರೌಂಡರ್‌ಗಳಿಗೆ ನಗದು ಪುರಸ್ಕಾರ)

### ಶ್ರೀಶಾರದಾ ಟ್ರೋಫಿ–2020 ಬಹುಮಾನಿತರ ವಿವರ

| | | | |
|---|---|---|---|
| 1. | ವಿಜೇತ ತಂಡ | : | ಬೆಳ್ತಂಗಡಿ–ಎ |
| 2. | ರನ್ನರ್ಸ್ ಅಪ್ ತಂಡ | : | ಬೆಂಗಳೂರು ಎಫ್.ಡಬ್ಲ್ಯು.ಎಫ್. |
| 3. | ಸೆಮಿ ಫೈನಲ್ ಕಳಕೊಂಡ ತಂಡಗಳು | : | ನಂದಳಿಕೆ–ಎ<br>ಎನ್.ಐ.ಟಿ.ಕೆ. ಸುರತ್ಕಲ್–ಎ |
| 4. | ಉತ್ತಮ ಬೌಲರ್ | : | ಸ್ವಾಮಿ, ಬೆಂಗಳೂರು ತಂಡ |
| | ಉತ್ತಮ ಬ್ಯಾಟ್ಸ್‌ಮ್ಯಾನ್ | : | ಪಂಚೇಶ್, ಸ್ಥಾನಿಕ ಬೆಳ್ತಂಗಡಿ ಎ |
| | ಉತ್ತಮ ಆಲ್‌ರೌಂಡರ್ | : | ಸುದರ್ಶನ್, ಸ್ಥಾನಿಕ ಬೆಳ್ತಂಗಡಿ ಎ |



ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು


RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS


## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ| ಅಂಬಲಪಾಡಿ ಕೃಷ್ಣರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ| ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ| ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು

## ವಿಶ್ವ ಸಮಾವೇಶದಲ್ಲಿ ಸನ್ಮಾನಗೊಂಡವರು

| | |
|---|---|
| ಕೃಷಿ ಕ್ಷೇತ್ರ | : ಶ್ರೀ ಬಿ.ಕೆ ದೇವರಾವ್, ಶ್ರೀ ದಯಾನಂದ ರಾವ್ ಶಂಕರನಾರಾಯಣ ಹಾಗೂ ಶ್ರೀ ಶಂಭುಶಂಕರ ರಾವ್ ಮಂದಾರ್ತಿ |
| ಯಶಸ್ವೀ ಉದ್ಯಮಿ | : ಶ್ರೀ ಶ್ರೀನಾಥ್ ಹೆಬ್ಬಾರ್ ಕಬ್ಬಿನಾಲೆ |
| ಕ್ರೀಡೆ | : ಕುಮಾರಿ ತಾನ್ಯಾ ರಾವ್ ಹಾಗೂ ಶ್ರೀ ಕುಮಾರಸ್ವಾಮಿ ಪಡುಬಿದ್ರೆ |
| ಸ್ಥಾನಿಕ ಸಂಘಟನೆ | : ಶ್ರೀ ಸಿ.ಎಸ್.ರಾವ್, ಉಡುಪಿ |
| ಸಮಾಜ ಸೇವೆ | : ಶ್ರೀ ಅಜ್ಜಾವರ ಶಿವರಾವ್ ಬೆಂಗಳೂರು ಹಾಗೂ ಶ್ರೀ ಎಂ.ಕೆ. ದಿವಾಕರ ರಾವ್ ಪಡುಬಿದ್ರೆ |
| ಶಿಕ್ಷಣ | : ಶ್ರೀಮತಿ ಸವಿತಾ ಎರ್ಮಾಳು |
| ಕಲೆ | : ಶ್ರೀ ಕರ್ಜೆ ಶ್ರೀಧರ ಹೆಬ್ಬಾರ್, ಶ್ರೀ ಕೆ.ವಿ. ರಮೇಶ್ ಕಾಸರಗೋಡು |
| ಧಾರ್ಮಿಕ ಸೇವೆ | : ಶ್ರಿ ಪಿ. ಲಕ್ಷ್ಮೀನಾರಾಯಣ ರಾವ್ ಧರ್ಮಸ್ಥಳ |
| ಸಾಹಿತ್ಯ | : ಪ್ರೊ. ಎ. ಶ್ರೀನಾಥ್ ಕಾಸರಗೋಡು ಹಾಗೂ ಶ್ರೀ ಸುಕುಮಾರ ಆಲಂಪಾಡಿ |
| ಬ್ಯಾಂಕಿಂಗ್ | : ಶ್ರೀ ಬೊಕ್ಕಸ ಚಂದ್ರಶೇಖರ ರಾವ್, ಜನರಲ್ ಮನೇಜರ್, ಕರ್ನಾಟಕ ಬ್ಯಾಂಕ್ |
| ಇಂಜಿನಿಯರಿಂಗ್ | : ಶ್ರೀ ಎಂ.ಎಸ್.ರಾಧಾಕೃಷ್ಣ ರಾವ್, ಬೆಂಗಳೂರು |
| ಮುದ್ರಣ ಕ್ಷೇತ್ರ | : ಶ್ರೀ ಎಂ.ಎಸ್.ರಘುನಾಥ ರಾವ್, ಪುತ್ತೂರು |
| ಸಾಧಕ ಮಹಿಳೆ | : ಶ್ರೀಮತಿ ವಿದ್ಯಾ ಬಿ.ವಿ.ರಾವ್ |
| ವೈದಿಕ ಕ್ಷೇತ್ರ | : ಶ್ರೀ ಕೇಶವ ಶರ್ಮ, ಬೆಂಗಳೂರು |
| ವಕೀಲ ವೃತ್ತಿ | : ಶ್ರೀ ಬಿ. ಶರತ್ ಕುಮಾರ್, ಬೆಂಗಳೂರು |
| ವೈದ್ಯಕೀಯ ಹಾಗೂ ವಿಜ್ಞಾನ | : ಡಾ। ನಾಗಭೂಷಣ್, ಮುಲ್ಕಿ ಹಾಗೂ ಡಾ। ಉಷಾ ಕೋಲ್ಪೆ, ಅಮೇರಿಕಾ |
| ಪ್ರತಿಭಾ ಪುರಸ್ಕಾರ ಪಡೆದವರು | : ಡಾ.ತಿಲಕ್ ರಾವ್, ಕುಮಾರಿ ದಿವ್ಯಾಶ್ರೀ, ಅರ್ಪಿತಾ ರಾವ್ ಸುರತ್ಕಲ್, ಪ್ರಣವ್ ಕಾಸರಗೋಡು, ಕು। ಪೂರ್ವಿ ಮಂಗಳೂರು, ಶುಭಾಂಜನ ಭಟ್ ಮೂಡಬಿದ್ರೆ, ಅಕ್ಷತಾ ರಾವ್ ಪಡುಬಿದ್ರೆ, ರೋಹನ್ ರಾವ್ ಕುಂದಾಪುರ |


ನಮ್ಮ ಸಂಘದ ಸಲಹೆಗಾರರಾದ ಶ್ರೀ ಸಿ.ಎಸ್.ರಾಯರಿಗೆ ಸ್ಥಾನಿಕ ಸಂಘಟನೆಗಾಗಿ ವಿಶ್ವಸಮ್ಮೇಳನದಲ್ಲಿ ಸನ್ಮಾನ

## ವಿಶ್ವಸಮಾವೇಶದಲ್ಲಿ ಯುವಜನತೆಗಾಗಿ ನೂತನ ಯೋಜನೆ ಆರಂಭ

ಯುವಜನತೆಗೆ ಉತ್ತಮ ಉದ್ಯೋಗವನ್ನು ದೊರಕಿಸಿಕೊಳ್ಳುವುದು ಹೇಗೆ?, ಹಾಗೂ ಯಾವ ಕ್ಷೇತ್ರದಲ್ಲಿ ಪರಿಣತಿ ಸಂಪಾದಿಸಿದರೆ ಅನುಕೂಲವಾಗಬಹುದು?, ತಾನೀಗಾಗಲೆ ಕೈಗೊಂಡಿರುವ ಉದ್ಯೋಗದಲ್ಲಿ ಯಶಸ್ಸನ್ನು ಕಾಣುವುದು ಹೇಗೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರವಾಗಿ ನಮ್ಮ ಸಮಾಜದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಂದ ಅಂತರ್‌ಜಾಲದ ಮೂಲಕ ತರಬೇತಿ ನೀಡುವ ಕಾರ್ಯಕ್ರಮ "ಉದ್ಯೋಗ ದೀಪಿಕಾ" ಇದರ ಉದ್ಘಾಟನೆಯನ್ನು ಶ್ರೀ ಅಜ್ಜಾವರ ಶಿವರಾವ್ ನೆರವೇರಿಸಿದರು. ಶ್ರೀ ವಿದ್ಯಾರಣ್ಯ ಕೊಲ್ಲಿಪಾಲು ಅವರ ನೇತೃತ್ವ, ಶ್ರೀ ಧನಂಜಯ ಕುಮಾರ್ ಬೆಳ್ತಂಗಡಿ ಅವರ ದೂರದರ್ಶಿತ್ವ ಹಾಗೂ ಬೆಂಗಳೂರು ಸಂಘದ ಬೆಂಬಲದೊಂದಿಗೆ ಈ ನೂತನ ಯೋಜನೆ ಆರಂಭಗೊಂಡಿದೆ. ಇದರ ಮೊದಲನೇ ಕಂತು ತಾ.01-02-2020ರಂದು ಪ್ರಸಾರವಾಯಿತು.

## ಆಮಂತ್ರಣ

ಬೆಳ್ತಂಗಡಿ ಕೂಡಬೆಟ್ಟು ಶ್ರೀ ಸದಾಶಿವ ದೇವಸ್ಥಾನದಲ್ಲಿ ತಾ.21-02-2020ರ ಶುಕ್ರವಾರದಂದು ಮಹಾಶಿವರಾತ್ರಿ ಹಾಗೂ ತಾ.14-03-2020ರ ಶನಿವಾರ ಪ್ರತಿಷ್ಠಾ ವರ್ಧಂತ್ಯುತ್ಸವವು ಜರಗಲಿದ್ದು ಸಮಾಜಬಾಂಧವರೆಲ್ಲರನ್ನೂ ಆದರದಿಂದ ಆಮಂತ್ರಿಸುತ್ತಿದ್ದೇವೆ.

–ಆಡಳಿತ ಮಂಡಳಿ


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)



ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams


## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ತಾ.12-03-2020 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.18-02-2020 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.28-02-2020, ಮತ್ತು ತಾ.13-03-2020 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಮಾರ್ಚ್ ತಿಂಗಳ ಶಾಶ್ವತ ಸೇವಾಕರ್ತರ ವಿವರ

1. ಶ್ರೀ ಬೈಲಕೆರೆ ನಾರಾಯಣ ರಾವ್
2. ಶ್ರೀ ಹೆಚ್.ನಿರಂಜನ ರಾವ್, ಹೆರ್ಗ
3. ಶ್ರೀ ಬಿ. ರವೀಂದ್ರನಾಥ ರಾವ್, ಬೆಂಗಳೂರು
4. ಶ್ರೀ ರವೀಂದ್ರನಾಥ ಬೆಳ್ಳೆ, ಬೆಂಗಳೂರು
5. ಶ್ರೀ ರಾಜ, ಧರ್ಮಸ್ಥಳ
6. ಶ್ರೀ ಅಲೆವೂರು ಸುಬ್ರಹ್ಮಣ್ಯ ರಾವ್
7. ಶ್ರೀ ಆರ್.ಪಿ.ಶೆಟ್ಟಿ, ಬ್ರಹ್ಮಗಿರಿ
8. ಶ್ರೀ ಸುಂದರ ರಾವ್, ಚೊಕ್ಕಾಡಿ
9. ನಿರ್ಮಲಾ ಶೆಟ್ಟಿಗಾರ್, ಮುಂಬಯಿ
10. ಅಮೃತಾ, ಮುಂಬಯಿ
11. ಶ್ರೀ ಎ. ದಿವಾಕರ ಶಾಸ್ತ್ರಿ, ಹಿರಿಯಡಕ
12. ಶ್ರೀಮತಿ ಅಮಿತಾ ಎ.ರಾವ್, ಮುಂಬಯಿ
13. ಶ್ರೀ ಕೆ. ಜೀವನ್, ಮೂಡಿಗೆರೆ
14. ಶ್ರೀ ಯು. ಜಯಂತ್ ರಾವ್
15. ಶ್ರೀ ಸಂದೇಶ್ ಎಮ್.ರಾವ್, ಇಂದಾಪುರ
16. ಶ್ರೀ ಸಾತ್ವಿಕ್ ರಾವ್, ಉಡುಪಿ
17. ಶ್ರೀ ಕೆ. ಉಪೇಂದ್ರ ಭಟ್, ಕುಂಜಿಬೆಟ್ಟು
18. ಶ್ರೀ ಗಿರೀಶ್ ರಾವ್, ಮೂಡು ಅಲೆವೂರು
19. ಶ್ರೀ ಕೆ. ವಿಠಲ್ ರಾವ್, ಮುಂಬಯಿ
20. ಶ್ರೀ ಮುರಳೀಧರ ರಾವ್, ಕುಂಜಿಬೆಟ್ಟು
21. ಶ್ರೀ ರಾಮಚಂದ್ರ ಮಯ್ಯ, ಕುಂಜಿಬೆಟ್ಟು
22. ಕು। ಪ್ರಕೃತಿ ಎಮ್.ಶೆಟ್ಟಿ, ಬೆಂಗಳೂರು
23. ಶ್ರೀಮತಿ ಚೇತನಾ, ಮೂಡು ಅಲೆವೂರು
24. ಶ್ರೀ ನವನೀತ್, ಬನ್ನಂಜೆ
25. ಶ್ರೀ ಸಿದ್ಧಾರ್ಥ್ ಬನ್ನಂಜೆ
26. ಶ್ರೀ ಕೆ. ಚಂದ್ರಶೇಖರ ರಾವ್, ನಾಸಿಕ್
27. ಶ್ರೀಮತಿ ಕೀರ್ತಿ ಗಣೇಶ್ ರಾವ್, ಕುಂಜಿಬೆಟ್ಟು
28. ಶ್ರೀ ಕೆ. ವೆಂಕಟರಮಣ ರಾವ್, ಕುಡಾಲ್
29. ಶ್ರೀ ಅರವಿಂದ ಪುರಾಣಿಕ್, ರಾಯಗಡ್
30. ಶ್ರೀ ಅನಿಲ್‌ರಾವ್, ಉದ್ಯಾವರ
31. ಶ್ರೀಮತಿ ಜಯಲಕ್ಷ್ಮೀ ಎಮ್.ರಾವ್, ಕುಂಜಿಬೆಟ್ಟು
32. ಶ್ರೀ ಪ್ರೇರಣಾ ಎಮ್.ರಾವ್, ಚಿಟ್ಪಾಡಿ
33. ಶ್ರೀ ಐ.ಕೆ.ಸದಾಶಿವ ರಾವ್, ಚೆನ್ನೈ
34. ಶ್ರೀಮತಿ ಶೀತಲ್ ಮಂಗಳೂರು
35. ಶ್ರೀಮತಿ ಸರೋಜಿನಿ ಕೆ.ಎನ್., ಮಂಗಳೂರು
36. ಶ್ರೀಮತಿ ಸೀನಿ ಹರಿಲಾಲ, ತ್ರಿಚೂರ್
37. ಶ್ರೀ ಮೋಹನ್ ರಾವ್, ಪೆರ್ಡೂರು
38. ಶ್ರೀಮತಿ ನಯನಾ ರಾವ್, ಬಯಂದರ್
39. ಶ್ರೀ ಶ್ಯಾಮರಾವ್ & ಶ್ರೀಮತಿ ಸುಜಾತಾ, ಮಂಗಳೂರು
40. ಶ್ರೀ ಪ್ರಣವ್ ಜೆ.ಪಟ್ಲ, ಬೆಂಗಳೂರು

### ಕುಂಭ ಮಾಸದ ವಿಶೇಷ ದಿನಗಳು

| | |
|---|---|
| 13–02–2020 | ಕುಂಭ ಸಂಕ್ರಮಣ |
| 19–02–2020 | ಸರ್ವೈಕಾದಶಿ |
| 21–02–2020 | ಮಹಾಶಿವರಾತ್ರಿ |
| 23–02–2020 | ಅಮಾವಾಸ್ಯೆ |
| 24–02–2020 | ಶಿಶಿರ ಋತು, ಫಾಲ್ಗುಣ ಮಾಸದ ಶುಕ್ಲಪಕ್ಷಾರಂಭ |
| 06–03–2020 | ಸರ್ವೈಕಾದಶಿ |
| 09–03–2020 | ಹುಣ್ಣಿಮೆ, ಹೋಲಿಕಾ ಕಾಮದಹನ |
| 10–03–2020 | ಶಿಶಿರ ಋತು, ಫಾಲ್ಗುಣ ಮಾಸದ ಕೃಷ್ಣಪಕ್ಷಾರಂಭ |
| 12–03–2020 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9–27ಕ್ಕೆ |
| 05–03–2020 | ಉಡುಪಿ ಶ್ರೀ ಶಾರದಾ ದೇವಸ್ಥಾನಕ್ಕೆ ಶೃಂಗೇರಿ ಶ್ರೀ ಶ್ರೀಗಳ ಆಗಮನ |
| 06–03–2020 | ಉಡುಪಿಯ ಶ್ರೀ ಶಾರದಾ ದೇವಸ್ಥಾನದ ಕುಂಭಾಭಿಷೇಕ |
| 14–03–2020 | ಮೀನ ಸಂಕ್ರಮಣ |
| 19–03–2020 | ಸರ್ವೈಕಾದಶಿ |


Ph : 98459 92859

**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.



SAMPATH KUMAR
Mobile : 9741508881


**TRISHULINI TOURIST**
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE






## ಶ್ರೀಶಾರದಾ ಮಂಟಪದಲ್ಲಿ ಮಹಿಳೆಯರು ಮತ್ತು ಮಕ್ಕಳಿಗಾಗಿ ಕ್ರೀಡಾ ಸ್ಪರ್ಧೆ






ತಾ.02–02–2020 ರವಿವಾರ ಶ್ರೀ ಶಾರದಾ ಮಂಟಪದಲ್ಲಿ ಮಹಿಳಾ ವೇದಿಕೆಯಿಂದ ಮಕ್ಕಳಿಗೆ ಹಾಗೂ ಮಹಿಳೆಯರಿಗಾಗಿ ಪಂದ್ಯಾಟಗಳನ್ನು ಮಹಿಳಾ ವೇದಿಕೆಯ ವತಿಯಿಂದ ಆಯೋಜಿಸಲಾಗಿತ್ತು. ಬೆಳಗಿನ ಉಪಾಹಾರದ ನಂತರ ಮಹಿಳಾ ವೇದಿಕೆಯ ಹಿರಿಯ ಸದಸ್ಯೆಯಾದ ಶ್ರೀಮತಿ ಸುನಂದಾ ಸಿ.ಎಸ್.ರಾವ್ ಇವರು ದೀಪಬೆಳಗಿಸಿ ಒಳಾಂಗಣ ಮಹಿಳಾ ಮತ್ತು ಮಕ್ಕಳ ಕ್ರೀಡೆಗಳನ್ನು ಉದ್ಘಾಟಿಸಿದರು. ನಂತರ ಮಕ್ಕಳಿಗೆ ಹಾಗೂ ಮಹಿಳೆಯರಿಗೆ ವಿವಿಧ ಮೋಜಿನ ಪಂದ್ಯಾಟಗಳನ್ನು ನೆರವೇರಿಸಲಾಯಿತು. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಪೂರ್ಣಿಮಾ ಪಿ.ರಾವ್, ಸಂಚಾಲಕಿ ಶ್ರೀಮತಿ ರಜನಿ ಹೆಬ್ಬಾರ್, ಶ್ರೀಮತಿ ಜಯಂತಿ ಭಾಸ್ಕರ್ ರಾವ್, ಶ್ರೀಮತಿ ಜಯಲಕ್ಷ್ಮೀ ಮುರಳೀಧರ ರಾವ್, ಡಾ|ವಿದ್ಯಾ ಎಸ್. ರಾವ್, ಶ್ರೀಮತಿ ಉಷಾ ಮೋಹನ್ ದೇವ್, ಶ್ರೀಮತಿ ಪ್ರೀತಿ, ಶ್ರೀಮತಿ ಉಷಾ ಶ್ಯಾನುಭಾಗ್ ಹಾಗೂ ಮಹಿಳಾ ವೇದಿಕೆಯ ಇತರ ಸದಸ್ಯೆಯರು ಉಪಸ್ಥಿತರಿದ್ದು ಕ್ರೀಡೆಗಳನ್ನು ನಡೆಸಿಕೊಟ್ಟರು. ಭೋಜನಾನಂತರದ ಸಭಾಕಾರ್ಯಕ್ರಮಕ್ಕೆ ಉಡುಪಿ ಬಿ.ಆರ್.ಶೆಟ್ಟಿ ಸರಕಾರಿ ಹೆಮ್ಮಕ್ಕಳ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ| ಸ್ವರ್ಣಲತಾ ಅತಿಥಿಯಾಗಿ ಆಗಮಿಸಿ ಮಧ್ಯವಯಸ್ಕ ಹೆಂಗಳೆಯರ ಆರೋಗ್ಯದ ಕುರಿತು ಮಾತನಾಡಿ ಬಹುಮಾನ ವಿತರಿಸಿದರು. ಶ್ರೀಮತಿ ರಜನಿ ಹೆಬ್ಬಾರ್ ಬಹುಮಾನ ವಿಜೇತರ ಪಟ್ಟಿಯನ್ನು ವಾಚಿಸಿದರು. ಸಮಾರೋಪ ಸಮಾರಂಭದಲ್ಲಿ ಶ್ರೀಮತಿ ಪೂರ್ಣಿಮಾ ಪಿ.ರಾವ್, ಶ್ರೀಮತಿ ಜಯಲಕ್ಷ್ಮೀ ಮುರಳೀಧರ ರಾವ್ ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಮತ್ತು ಕೋಶಾಧಿಕಾರಿ ಶ್ರೀ ಬಿ.ಜಯರಾಮ ರಾಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಬಾರ್ಕೂರು ಮಾಸ್ತಿಅಮ್ಮ ದೇವಸ್ಥಾನದ ಕಾರ್ಯಕ್ರಮಗಳು



ಬಾರ್ಕೂರು ಮಸ್ಕೆಬೈಲು ಅನಂತಪದ್ಮನಾಭ ರಾವ್ ಇವರ ಮನೆಯಲ್ಲಿ ಇತ್ತೀಚೆಗೆ ಏಕಾದಶಿನಿ ರುದ್ರಯಾಗ ಶ್ರೀ ಕ್ಷೇತ್ರ ಮಂದಾರ್ತಿ ಮೇಳದವರಿಂದ ಯಕ್ಷಗಾನ ಬಯಲಾಟ ಹಾಗೂ ಮಹಾ ಅನ್ನಸಂತರ್ಪಣೆಯು ವಿಜೃಂಭಣೆಯಿಂದ ಜರುಗಿತು.



ಬಾರ್ಕೂರು ಧರ್ಮಶಾಲೆ ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನದಲ್ಲಿ ವಾರ್ಷಿಕೋತ್ಸವದ ಪ್ರಯುಕ್ತ ಹವರಾಲು ಹರೀಶ್ ಹೆಬ್ಬಾರ್ ಮತ್ತು ಬಳಗದವರಿಂದ ಭಕ್ತಿ ಭಾವಗಾನ ಜರುಗಿದ್ದು ದೇವಸ್ಥಾನದ ಅರ್ಚಕರಾದ ಅನಂತಪದ್ಮನಾಭ ರಾವ್ ಗೌರವಿಸಿದರು.

## ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಎಳ್ಳಮಾವಾಸ್ಯೆ ಉತ್ಸವ ಸಂಪನ್ನ

ಪಡುಬಿದ್ರಿಯ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯುವ ಶ್ರೀ ಎಳ್ಳಮಾವಾಸ್ಯೆ ಉತ್ಸವವು ವೇದಮೂರ್ತಿ ಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಸಂಪನ್ನಗೊಂಡಿತು.

ತಾರೀಕು 26.12.2019 ರಂದು ಕಂಕಣ ಸೂರ್ಯಗ್ರಹಣ ಪ್ರಯುಕ್ತ ಪ್ರಾತಃ ಕಾಲದಲ್ಲಿ 5.30 ರಿಂದ 7.30 ರವರೆಗೆ ಅಥರ್ವಶೀರ್ಷ ಸಹಸ್ರಮೋದಕ ಗಣಯಾಗವು ನೆರವೇರಿತು. 8.00 ರಿಂದ 11.00 ರವರೆಗೆ ಸೂರ್ಯಗ್ರಹಣದ ಪುಣ್ಯಕಾಲದಲ್ಲಿ ಸಾಮೂಹಿಕ ಗ್ರಹಣ ಶಾಂತಿಯು ನಡೆಯಿತು. ಈ ಗ್ರಹಣ ಶಾಂತಿ ಹೋಮದಲ್ಲಿ ಊರ ಪರವೂರ ಸುಮಾರು 300 ಭಕ್ತರು ಭಾಗವಹಿಸಿದರು. ತದನಂತರ ಸಾರ್ವಜನಿಕ ಅನ್ನಸಂತರ್ಪಣೆ ನೆರವೇರಿತು. ಮಧ್ಯಾಹ್ನ 3.00 ರಿಂದ 7.00 ಗಂಟೆಯವರೆಗೆ ವಿವಿಧ ಭಜನಾಮಂಡಳಿಯಿಂದ ಭಜನಾ ಕಾರ್ಯಕ್ರಮಗಳು ಜರಗಿದವು. ರಾತ್ರಿ ಮಹಾಪೂಜೆ, ಬಲಿ, ಪಲ್ಲಕ್ಕಿ ಸೇವೆ, ಕಟ್ಟೆ ಪೂಜೆ, ಪ್ರಸಾದ ವಿತರಣೆ ಮಂತ್ರಾಕ್ಷತೆಯೊಂದಿಗೆ ಎಳ್ಳಮಾವಾಸ್ಯೆ ಉತ್ಸವ ಸಂಪನ್ನಗೊಂಡಿತು.

ದಿನಾಂಕ 12.12.2019 ರಿಂದ 26.12.2019 ರವರೆಗೆ ಪ್ರತಿ ದಿನ ರಾತ್ರಿ 7.30 ಕ್ಕೆ ಸಾಮೂಹಿಕ ರಂಗಪೂಜೆ ಸೇವೆ ಜರಗಿತು.

**ಎಳ್ಳಮಾವಾಸ್ಯೆ ಉತ್ಸವಕ್ಕೆ ಹೊರೆಕಾಣಿಕೆ :** ಎಳ್ಳಮಾವಾಸ್ಯೆ ಉತ್ಸವಕ್ಕೆ ಪಡುಬಿದ್ರಿಯ ಖ್ಯಾತ ವೈದ್ಯರಾದ ಡಾ| ಗುರುಪ್ರಸಾದ್ ಕುಟುಂಬಸ್ಥರಿಂದ 1 ಕ್ವಿಂಟಾಲ್ ಅಕ್ಕಿ, ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಿಂದ ತುಪ್ಪ ತೊಗರಿಬೇಳೆ, ಬೆಲ್ಲ, ಸಕ್ಕರೆ, ಇತ್ಯಾದಿ ದ್ರವ್ಯಗಳು, ಕರುಣಾಕರ ಬೆಳ್ಳೆಯವರಿಂದ ದೀಪದ ಎಣ್ಣೆ, 250 ತೆಂಗಿನಕಾಯಿ, ರವಿಕುಮಾರ್ ಕಾರ್ನಾಡುರಿಂದ 25 ಕೆ.ಜಿ ಅಕ್ಕಿ, ಸುದರ್ಶನ್ ರಾವ್, ಇನ್ನ ಕುಟುಂಬಸ್ಥರು, ಜನಾರ್ದನ ರಾವ್ ನಂದಿಕೂರು, ರಾಜಶೇಖರ್ ರಾವ್ ಹೆಜಮಾಡಿ ಅಲ್ಲದೆ ಬಳ್ಪ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಿಂದ 50 ಕೆ.ಜಿ ಅಕ್ಕಿ, ತರಕಾರಿ, ನರೇಂದ್ರ ಸ್ವಾಮಿಯವರಿಂದ ಹೂವಿನ ಸೇವೆ ಹೊರೆಕಾಣಿಕೆಯಾಗಿ ಸಮರ್ಪಣೆಗೊಂಡವು.

ಎಳ್ಳಮಾವಾಸ್ಯೆ ಜಾತ್ರೆಗೆ ಸಹಕರಿಸಿದ 'ಸ್ಥಾನಿಕ ಬ್ರಾಹ್ಮಣ ಸಭಾ' ಪಡುಬಿದ್ರಿ ಮತ್ತು 'ಸುರತ್ಕಲ್ ಸ್ಥಾನಿಕ ಸಂಘ' ದ ಸದಸ್ಯರಿಗೆ ಶ್ರೀ ಕ್ಷೇತ್ರದ ವತಿಯಿಂದ ಆಡಳಿತ ಮಂಡಳಿಯು ಧನ್ಯವಾದಗಳನ್ನು ಅರ್ಪಿಸುತ್ತದೆ.

**ಪುಷ್ಪರಥ ನಿರ್ಮಾಣಕ್ಕೆ ಚಾಲನೆ :** 2021 ರಲ್ಲಿ ಶ್ರೀ ಕ್ಷೇತ್ರ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ನಡೆಯಲಿರುವ ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ಶ್ರೀ ದೇವರಿಗೆ ಪುಷ್ಪರಥವನ್ನು ನಿರ್ಮಿಸುವ ಕೆಲಸಕ್ಕೆ ಶ್ರೀ ಕ್ಷೇತ್ರದ ತಂತ್ರಿಯವರಾದ ಶ್ರೀ ವಾಗೀಶ ಶಾಸ್ತ್ರಿಯವರು ಹೆಜಮಾಡಿಯ ಕಾಷ್ಠಶಿಲ್ಪಿಯಾದ ಶ್ರೀ ಮಾಧವ ಆಚಾರ್ಯರಿಗೆ ಶ್ರೀ ದೇವರ ಪ್ರಸಾದ ಕೊಡುವ ಮೂಲಕ ಚಾಲನೆ ನೀಡಿದರು.

**ವರದಿ : ಶ್ರೀನಿವಾಸ್ ಶರ್ಮ, ಕಾರ್ಯದರ್ಶಿ**

## ಮನೋಹರ್ ಪ್ರಸಾದ್‌ರವರಿಗೆ ಕರಾವಳಿ ಪ್ರಶಸ್ತಿ



ಕರಾವಳಿ ಉತ್ಸವ ಅಂಗವಾಗಿ ನೀಡಲಾಗುವ ಕರಾವಳಿ ಗೌರವ ಪ್ರಶಸ್ತಿಗೆ ಹಿರಿಯ ಪತ್ರಕರ್ತ ಮನೋಹರ್ ಪ್ರಸಾದ್ ಆಯ್ಕೆಯಾಗಿದ್ದಾರೆ. ಪತ್ರಿಕೋದ್ಯಮದಲ್ಲಿ 36 ವರ್ಷ ಅನುಭವ ಇರುವ ಮನೋಹರ್ ಪ್ರಸಾದ್ ಅವರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಾಧ್ಯಮ ಅಕಾಡೆಮಿ ಪ್ರಶಸ್ತಿ, ಉಲ್ಲಾಳ ಶ್ರೀನಿವಾಸ್ ಮಲ್ಯ ಪ್ರಶಸ್ತಿ ಸಹಿತ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ.

## ನಿರ್ದೇಶಕರಾಗಿ ಆಯ್ಕೆ



ನಮ್ಮ ಸಂಘದ ನಿರ್ದೇಶಕರಾದ ಶ್ರೀ ಅಶೋಕ್ ರಾವ್ ರವರು ಕಟಪಾಡಿ ಸಹಕಾರಿ ವ್ಯವಸಾಯಿಕ ಸಂಘ (ನಿ.), ಇದರ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಇವರಿಗೆ ನಮ್ಮ ಸಂಘದ ಪರವಾಗಿ ಅಭಿನಂದನೆಗಳು.

## ನಂದಳಿಕೆ ಪ್ರವೀಣ್ ಕುಮಾರ್‌ರಿಗೆ ಸನ್ಮಾನ



ಖ್ಯಾತ ಭಾಗವತ, ಯಕ್ಷಕಲಾ ಸಾಧಕ ನಂದಳಿಕೆ ಪ್ರವೀಣ್ ಕುಮಾರ್‌ರವರನ್ನು ಕವಿಮುದ್ದಣ್ಣರವರ 150ನೇ ಜನ್ಮ ಜಯಂತಿಯ ಪ್ರಯುಕ್ತ ನಡೆದ ಸಮಾರಂಭದಲ್ಲಿ ನಂದಳಿಕೆ ಕವಿಮುದ್ದಣ್ಣ ಮಿತ್ರಮಂಡಳಿಯ ವತಿಯಿಂದ ಸನ್ಮಾನಿಸಲಾಯಿತು.

*With Best Complimemts From*

SRI M. SHAILESH RAO Ph : 9448624324

B.E., Civil

Civil Engineer & Contractor

**SRI MALAVIKA ASSOCIATES**

KALSANKA-UDUPI ROAD, UDUPI.

Website : shreemaalavikaassociates.com

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಶುಭ ವಿವಾಹ

ಶ್ರೀ ಕೆಮ್ಮಣ್ಣು ಬಾಲಕೃಷ್ಣ ರಾವ್ ಮತ್ತು ಶ್ರೀಮತಿ ಅನುಪಮಾ ಇವರ ಪುತ್ರ **ಅರ್ಜುನ್** ಹಾಗೂ ಶ್ರೀ ರಾಹುಲ್ ಕರ್ಣಿಕ್ ಮತ್ತು ಶ್ರೀಮತಿ ಪ್ರಾಜಕ್ತಿ ಇವರ ಪುತ್ರಿ **ತನಿಕ** ಇವರ ವಿವಾಹವು ತಾ.31.01.2020ರಂದು ಮುಂಬಯಿ ವಿಲೆಪಾರ್ಲೆಯ ಬಾಬುಬಾಯಿ ಜಗಜೀವನ್‌ದಾಸ್ ಹಾಲ್‌ನಲ್ಲಿ ನೆರವೇರಿತು.

★★★★ ★★★★

ಬೆಂಗಳೂರು ಶ್ರೀ ಸಿದ್ಧಾರ್ಥಶಂಕರ ಹೆಬ್ಬಾರ್ ಹಾಗೂ ಶ್ರೀಮತಿ ಸುಜಾತ ಇವರ ಪುತ್ರ **ಸವ್ಯಸಾಚಿ** ಹಾಗೂ ಮಡಗಾಂ ಶ್ರೀ ಸೀತಾರಾಮ್ ಪರಮೇಶ್ವರ ಭಟ್ ಹಾಗೂ ಶ್ರೀಮತಿ ಸುಧಾ ಇವರ ಪುತ್ರಿ **ತನುಜಾ** ಇವರ ವಿವಾಹವು 26.01.2020ರಂದು ಗೋವಾ ಮಾರ್ಧೋಳ ಶ್ರೀ ಸಿಂಹ ಪುರುಷ ಹಾಲ್‌ನಲ್ಲಿ ನೆರವೇರಿತು.

★★★★ ★★★★

ಉಜ್ಜೋಡಿ ಶ್ರೀ ಕಲಾಸಾಗರ ಯು ಹಾಗೂ ಶ್ರೀಮತಿ ಸುಮಂಗಲ ಇವರ ಪುತ್ರಿ **ರಕ್ಷಿತಾ** ಹಾಗೂ ಶ್ರೀ ಮಹಾದೇವನ್ ಹಾಗೂ ಶ್ರೀಮತಿ ವಸಂತಾ ಇವರ ಪುತ್ರ **ಶ್ರೀಅನಂತರಾಮಕೃಷ್ಣನ್** ಇವರ ವಿವಾಹವು 16.01.2020ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನೆರವೇರಿತು.

★★★★ ★★★★

ಮಂಗಳೂರು ಶ್ರೀ ಕಾಂತಾವರ ಪ್ರಭಾಕರ್ ರಾವ್ ಹಾಗೂ ಶ್ರೀಮತಿ ಪ್ರಭಾ ಇವರ ಪುತ್ರ **ಶರತ್** ಹಾಗೂ ಶ್ರೀ ರಂಗ ಮಿಂಯಾರ್ ಹಾಗೂ ಶ್ರೀಮತಿ ವಿಜಯಮಾಲತಿ ಇವರ ಪುತ್ರಿ **ಶ್ರೀಜ** ಇವರ ವಿವಾಹವು ತಾ 06-12-2019ರಂದು ಉಡುಪಿ ಜಿಲ್ಲೆಯ ಉಚ್ಚಿಲದ ಶ್ರೀ ಮಹಾಲಕ್ಷ್ಮಿ ಸಭಾಭವನದಲ್ಲಿ ನೆರವೇರಿತು

## ಬ್ರಹ್ಮೋಪದೇಶ

ಶ್ರೀಮತಿ ಮಾನಸ ರಾವ್ ಮತ್ತು ಶ್ರೀ ಎಂ.ಪ್ರಕಾಶ ರಾವ್ ಬೈಂದೂರು ಇವರ ಪುತ್ರ ಆರ್ಯನ್‌ನ ಬ್ರಹ್ಮೋಪದೇಶವು ತಾ.07.02.2020ರಂದು ಕುಂದಾಪುರದ ಹಂಗಳೂರಿನ ಶ್ರೀ ವೆಂಕಟಲಕ್ಷ್ಮಿ ಕಲ್ಯಾಣಮಂಟಪದಲ್ಲಿ ನೆರವೇರಿತು.

## ಗೃಹಪ್ರವೇಶ

ಕೀರ್ತಿಶೇಷ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಶಾಂಭವಿ ಚೊಕ್ಕಾಡಿ ಇವರ ಸುಪುತ್ರ ಶ್ರೀ ದಿವಾಕರ ರಾವ್ ಮತ್ತು ಶ್ರೀಮತಿ ವಿಜಯಲಕ್ಷ್ಮೀ ಇವರು ಚೊಕ್ಕಾಡಿಯಲ್ಲಿ ನಿರ್ಮಿಸಿರುವ "ಶ್ರೀ-ನಿವಾಸ" ಇದರ ಗೃಹ ಪ್ರವೇಶ ಸಮಾರಂಭವು ತಾ.30.01.2020ರಂದು ನೆರವೇರಿತು.

## ನಿಧನ

### ಶ್ರೀ ವಿಜಯರಾವ್



ಕಲ್ಯಾ ಹಾಳೆಕಟ್ಟೆಯ ವಿಜಯರಾವ್ (75) ಅವರು ಹೃದಯಾಘಾತಕ್ಕೊಳಗಾಗಿ ಜನವರಿ 26 ರಂದು ನಿಧನ ಹೊಂದಿದರು. ಅವರು ಪತ್ನಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಮುಂಬೈಯಲ್ಲಿ ಉದ್ಯೋಗದಲ್ಲಿದ್ದ ಅವರು ನಿವೃತ್ತಿ ಬಳಿಕ ಊರಿಗೆ ಮರಳಿ ಸಮಾಜ ಸೇವೆಯಲ್ಲಿ ತೊಡಗಿದ್ದರು. ಕಲ್ಯಾ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಗೌರವ ಅಧ್ಯಕ್ಷರಾಗಿ ಶಾಲೆ ಅಭಿವೃದ್ಧಿಗೆ ಶ್ರಮಿಸಿದ್ದರು.

★★★★ ★★★★

### ಶ್ರೀ ಭುಜಂಗರಾಯರು



ನಂದಳಿಕೆ ಕಡೇಂಜಿ ಶಿವಶಕ್ತಿ ನಿವಾಸದ ಶ್ರೀ ಭುಜಂಗರಾಯರು ತಾ 24-01-2020ರಂದು ನಿಧನ ಹೊಂದಿದರು

★★★★ ★★★★

### ಶ್ರೀಮತಿ ವಿಜಯಾ




ಗೋವಾ ಪೋಂಡಾ ನಿವಾಸಿ ಶ್ರೀ ರಾಜಾರಾಂ ಧಾರೇಶ್ವರ್‌ರವರ ಪತ್ನಿ ಶ್ರೀಮತಿ ವಿಜಯಾರವರು ತಾ.13.01.2020 ರಂದು ನಿಧನ ಹೊಂದಿದರು.

## ಕಾಪುವಿನಲ್ಲಿ ಶ್ರೀ ಮ.ನಾ ಹೆಬ್ಬಾರರ ಭಾಷಣ ಕಾರ್ಯಕ್ರಮ



ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಜರಗಿದ 'ಶಾಲೆಯತ್ತ ಸಾಹಿತ್ಯ' ಕಾರ್ಯಕ್ರಮದಡಿಯಲ್ಲಿ ಕಾಪು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ದಿನಾಂಕ 16-11-2019ರಂದು ಕಾಪು ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್‌ನಲ್ಲಿ ಶ್ರೀ ಮರೂರು ನಾರಾಯಣ ಹೆಬ್ಬಾರ ಇವರು ಭಾಗವಹಿಸಿ ಕನ್ನಡ ಸಾಹಿತ್ಯದ ಬಗ್ಗೆ ಭಾಷಣವಿತ್ತರು. ಹಿರಿಯ ಸಾಹಿತಿಗಳೂ ಖ್ಯಾತ ಹರಿದಾಸರೂ ಆಗಿರುವ ಶ್ರೀ ಮ.ನಾ.ಹೆಬ್ಬಾರರು ಕನ್ನಡ ಸಾಹಿತ್ಯದ ವಿವಿಧ ಮಜಲುಗಳು, ಕಾಲಕ್ಕನುಗುಣವಾಗಿಯೂ, ಕವಿಪ್ರಕಾರಕ್ಕನುಗುಣವಾಗಿಯೂ ಚಂಪೂ, ಗದ್ಯ, ಪದ್ಯ, ವಚನ, ಜಾನಪದ ಇತ್ಯಾದಿಗಳನ್ನು ಸವಿಸ್ತಾರವಾಗಿ ವಿವರಿಸಿದರು. ಕಾಪು ತಾಲೂಕು ಕ.ಸಾ.ಪ. ಅಧ್ಯಕ್ಷ ಶ್ರೀ ಬಿ. ಪುಂಡಲೀಕ ಮರಾಠೆಯವರು ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಸಮಿತಿ ಸದಸ್ಯೆ ಸುದಕ್ಷಿಣೆ ಸಂಯೋಜಕರಾಗಿದ್ದರು. ವಿಶ್ರಾಂತ ಶಿಕ್ಷಕ ಶ್ರೀ ಕೃಷ್ಣಕುಮಾರ್ ಮಟ್ಟು ಇವರು ಶ್ರೀ ಹೆಬ್ಬಾರರನ್ನು ಸಭೆಗೆ ಪರಿಚಯಿಸಿದರು. ವಿದ್ಯಾರ್ಥಿ ಪ್ರತಿನಿಧಿಗಳು ಸ್ವಾಗತಿಸಿ ಧನ್ಯವಾದವಿತ್ತರು.

## ಅದಮಾರು ಶ್ರೀಗಳ ಭೇಟಿ



ನಮ್ಮ ಸಂಘದ ಲೆಕ್ಕಪರಿಶೋಧಕರಾದ ಶ್ರೀ ಗಣೇಶ್ ಹೆಬ್ಬಾರ್‌ರವರ ನಿವಾಸಕ್ಕೆ ಪರ್ಯಾಯ ಶ್ರೀ ಶ್ರೀ ಈಶಪ್ರಿಯ ಶ್ರೀಪಾದರು ಇತ್ತೀಚೆಗೆ ಭೇಟಿಯಿತ್ತರು. ಶ್ರೀ ಶ್ರೀ ಗಳಿಗೆ ಗಣೇಶ್ ಹೆಬ್ಬಾರ್ ದಂಪತಿಗಳು ಫಲಪುಷ್ಪ, ಪಾದಪೂಜೆ ಸಮರ್ಪಿಸಿದರು. ಶ್ರೀ ಗಣೇಶ್ ಹೆಬ್ಬಾರ್‌ರವರು ಅದಮಾರು ಮಠದ ಲೆಕ್ಕಪರಿಶೋಧಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

**ಕವನ**

### ವ್ಯವಸ್ಥೆ ಜಂಗಮವಾಣಿ

ಸಿಟ್ಟಿಲ್ಲ....
ವಿವಿಧ ಕೌಟುಂಬಿಕ ಸಂದರ್ಭಗಳಲ್ಲಿ
ಅವಮಾನಗೈದ ಕುಟುಂಬಿಕರ ಮೇಲೆ

ಆಕ್ರೋಶವಿಲ್ಲ ....
ವಿವಿಧ ಸಾಮಾಜಿಕ ಸನ್ನಿವೇಶಗಳಲ್ಲಿ
ಅವಹೇಳನಗೈದ ಸಾಮಾಜಿಕರ ಮೇಲೆ...

ನನಗೆ ನಿಜವಾಗಿಯೂ ಸಿಟ್ಟು, ಆಕ್ರೋಶಗಳಿರುವುದು
ವ್ಯಕ್ತಿಗಳ ಮೇಲಲ್ಲ, ವ್ಯವಸ್ಥೆಯ ಮೇಲೆ...

ನಮ್ಮನ್ನು ಆವರಿಸಿರುವ ಸಮಗ್ರ ಸಾಮಾಜಿಕ,
ಆರ್ಥಿಕ, ರಾಜಕೀಯ ವ್ಯವಸ್ಥೆಯ ಮೇಲೆ

ಅವಿನಾಭಾವವಾದುದು ವ್ಯಕ್ತಿ
ವ್ಯವಸ್ಥೆಗಳ ಸಂಬಂಧ

ಈ ವ್ಯವಸ್ಥೆಯೇ ವ್ಯಕ್ತಿಗಳನ್ನು
ಹತಾಶೆಗೆ ನೂಕುತ್ತದೆ.
ಕ್ರೌರ್ಯಕ್ಕೆ ತಳ್ಳುತ್ತದೆ....

ಅಂತಿಮವಾಗಿ, ಎಲ್ಲಾ ವ್ಯಕ್ತಿಗಳು
ಈ ವ್ಯವಸ್ಥೆಯ ಬಲಿಪಶುಗಳು...
(Finally all are victims of this System)

**-ಮಲ್ಲಿಕ್, ಉಳಿಯಾರು**

### ಇಂಚರವೆ

ಕಳವಳದ ಮನಸಿನೊಳು
ಬರೆದೆ ನಾ ಕವನವ
ಕೇಳಿದೊಡೆ ನಿನ್ನ
ಚಿಲಿಪಿಲಿಯೊಳಗಿನ ಸೌಂದರ್ಯವು

ಮುದ್ದು ಕೂಗಿನೊಳು
ನೆಮ್ಮದಿಯ ನಿಲುವು
ಹಾಗಾಗಿ
ನಿನ್ನೊಳು ನನ್ನೊಲವು

ಬಿಸಿಲ ಬೇಗೆ ಇಲ್ಲ
ನೆರಳ ಕೊರಗಿಲ್ಲ
ಹಗಲು ಕನಸುಗಳಿಲ್ಲ
ಸಂತಸವೇ ನಿನ್ನ ಮನದಲೆಲ್ಲಾ

ಬಂಧುಗಳ ಉಪಟಳವಿಲ್ಲ
ಸ್ನೇಹಿತರ ಕೋಪವಿಲ್ಲ
ಆಡಂಬರದ ಸುಳಿವಿಲ್ಲ
ನೆಮ್ಮದಿಯೇ ನಿನ್ನ ಜೀವನವೆಲ್ಲಾ
ಇಂಚರವೇ...
ನಾನೇಕೆ...
ನೀನಾಗಲಿಲ್ಲ...

**ಎಂ. ಗಣೇಶ್ ರಾವ್ ಶಿಕ್ಷಕರು ಬಾರಕೂರು**


## ಚೊಚ್ಚಲ ಚಿತ್ರ ಬಿಡುಗಡೆ



ದಿ। ಶ್ರೀ ಬಿ.ಎನ್.ಗೋಪಾಲಕೃಷ್ಣ ರಾವ್ ಹಾಗೂ ಶ್ರೀಮತಿ ಲೀಲಾವತಿ ಮತ್ತು ಕಂಕನಾಡಿ ಶ್ರೀ ರಘುರಾಮ್ ಶರ್ಮ ಹಾಗೂ ಶ್ರೀಮತಿ ರಾಧಾ ಶರ್ಮ ಇವರ ಮೊಮ್ಮಗಳಾದ ಮತ್ತು ಕದ್ರಿಯ ಶ್ರೀಮತಿ ಸ್ವರ್ಣಗೌರಿ ಮತ್ತು ಶ್ರೀ ಹರಿಪ್ರಸಾದ್ ರಾವ್ ದಂಪತಿಗಳ ಸುಪುತ್ರಿ ಕು. ಬಿ.ಎಚ್.ತನ್ವಿ ರಾವ್ ಇವರು ನಟಿಸಿರುವ ಚೊಚ್ಚಲ ಚಿತ್ರ ಹಾಗೂ ಶ್ರೀ ವಿನೋದ್ ಖನ್ನರವರ ಕೊನೆಯ ಚಿತ್ರ "ಗನ್ ಆಫ್ ಬನಾರಸ್" ಎಂಬ ಬಾಲಿವುಡ್ ಹಿಂದಿ ಚಿತ್ರ ಇದೇ 28.02.2020ರಂದು ಬಿಡುಗಡೆಯಾಗಲಿದೆ.


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521




ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**
ಕಾರ್ಯಕಾರಿಣಿ ಮಂಡಳಿ ಸದಸ್ಯರು



**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com



ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟದಲ್ಲಿ ಪ್ರಥಮ ಸ್ಥಾನ ಪಡೆದ ಬೆಳ್ವಂಗಡಿ ಎ ತಂಡ



ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟದಲ್ಲಿ ದ್ವಿತೀಯ ಸ್ಥಾನ ಪಡೆದ ಬೆಂಗಳೂರು ಎಫ್.ಡಬ್ಲ್ಯು.ಎಫ್. ತಂಡ



ಉತ್ತಮ ಆಲ್‌ರೌಂಡರ್ ಸುದರ್ಶನ್



ಉತ್ತಮ ದಾಂಡಿಗ ಪಂಚೇಶ್



ಉತ್ತಮ ಬೌಲರ್ ಸ್ವಾಮಿ



ಶ್ರೀಶಾರದಾ ಟ್ರೋಫಿ ಫಲಕಗಳು


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

### ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)





ತಂತ್ರಾಡಿ ವಿಶ್ವನಾಥ ಶಾನುಭೋಗ್

☎ 94487 24161
97417 85551



## ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು





ಡಾ। ಸಂಜಾತ ಎ. ಎಸ್.
B.D.S., MBA (HCS)
ಡೆಂಟಲ್ ಸರ್ಜನ್

## ಬೆಳ್ಳೆ ಡೆಂಟಲ್ ಕೇರ್

(ಎಕ್ಸ್‌ರೇ ವ್ಯವಸ್ಥೆಯೊಂದಿಗೆ)
ಫರ್ನ್ಸ್ ಕಾಂಪ್ಲೆಕ್ಸ್,
ಬೆಳ್ಳೆ ಪಂಚಾಯತ್ ಎದುರು, ಮೂಡುಬೆಳ್ಳೆ
ಮೊಬೈಲ್. : 9449419097, 9448523635





## ವೃಂದಾವನ್ ನೆಸ್ಟ್

ಶುದ್ಧ ಸಸ್ಯಾಹಾರಿ

ಎನ್.ಎಚ್. 66, ಕಟಪಾಡಿ, ಉಡುಪಿ

ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ

ಮೊಬೈಲ್.7899990950



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಆದರದ ಸ್ವಾಗತ ಬಯಸುವ

ಹೋಟೆಲ್ ವೃಂದಾವನ, ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್, ಪಡುಬಿದ್ರಿ | ವಿಶ್ವ ಟ್ರಾನ್ಸ್‌ಪೋರ್ಟ್, ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.

ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ

ವಿಶಾಲ ಪಾರ್ಕಿಂಗ್ ವ್ಯವಸ್ಥೆ



## ವಿವಾಹ ಮಹೋತ್ಸವದ ಬೆಳ್ಳಿಹಬ್ಬ



ಶ್ರೀ ಉದಯ ಬಾರ್ಕೂರು, ಬ್ರಹ್ಮಾವರ ಶ್ರೀಮತಿ ಅನುರಾಧಾ ರಾವ್

–: ಶುಭಕೋರುವ :–

ಕುಮಾರಿ ಮೇಧಾ ರಾವ್ (ಮಗಳು)

ಮಂದಾರ್ ರಾವ್ (ಮಗ)

ಬಂಧುಗಳು, ಅಭಿಮಾನಿಗಳು ಹಾಗೂ ಬ್ರಹ್ಮಾವರದ ಸಿಟಿಸೆಂಟರ್‌ನ ಸಿಬ್ಬಂದಿಗಳು

## ಪರ್ಯಾಯ ಅದಮಾರು ಶ್ರೀಗಳಿಗೆ ಗೌರವಾರ್ಪಣೆ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಕೋರಿಕೆಯಂತೆ ಜನವರಿ 18ರಂದು ಶ್ರೀಕೃಷ್ಣನ ಪೂಜಾ ಕೈಂಕರ್ಯದ ಪರ್ಯಾಯ ದೀಕ್ಷೆ ಸ್ವೀಕರಿಸಲಿರುವ ಅದಮಾರು ಮಠದ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನಕ್ಕೆ ಆಗಮಿಸಿ ಶ್ರೀ ಶಾರದೆಗೆ ಪೂಜೆ ಸಲ್ಲಿಸಿದರು. ಜ್ಞಾನ ಮಂದಿರದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಮಂಜುನಾಥ ಹೆಬ್ಬಾರ್ ಮತ್ತು ರಜನಿ ಹೆಬ್ಬಾರ್ ದಂಪತಿಗಳು ಅದಮಾರು ಸ್ವಾಮೀಜಿಯವರಿಗೆ ಪಾದಕಾಣಿಕೆ ನೀಡಿ ಗೌರವಿಸಿದರು.

ಶ್ರೀಪಾದರು ಆಶೀರ್ವಚನ ಗೈದು ಇಂತಹ ಪ್ರತಿಯೊಂದು ಸಂಘಟನೆಯೂ ಜಪ, ತಪದಂತಹ ಧಾರ್ಮಿಕ ವಿಧಿಗಳನ್ನು ಚಾಚೂ ತಪ್ಪದೆ ಅನುಷ್ಠಾನಗೊಳಿಸುವುದರೊಂದಿಗೆ ಕಿರಿಯರನ್ನು ಯುವಕರನ್ನು ಇಂತಹ ಕಾರ್ಯಗಳಿಗೆ ತೊಡಗಿಸಿಕೊಳ್ಳ ಬೇಕು. ಆ ಮೂಲಕ ಮನೋನಿಗ್ರಹ ಮತ್ತು ಏಕಾಗ್ರತೆಯ ಒಲವು ಚಿಕ್ಕಂದಿನಿಂದಲೇ ಅಭ್ಯಾಸವಾಗುವಂತೆ ನೋಡಿಕೊಳ್ಳಬೇಕು ಎಂದರು.

ಸಂಘದ ಮಾಜಿ ಅಧ್ಯಕ್ಷ ಸಿ.ಎಸ್.ರಾವ್ ಸ್ವಾಗತಿಸಿದರು. ಕಾರ್ಯದರ್ಶಿ ಅರವಿಂದ ಕುಮಾರ್, ಕೋಶಾಧಿಕಾರಿ ಜಯರಾಮ ರಾವ್, ಸಂಘದ ನಿರ್ದೇಶಕರು ಉಪಸ್ಥಿತರಿದ್ದರು. ಕೃಷ್ಣಕುಮಾರ್ ರಾವ್ ಮಟ್ಟು ವಂದಿಸಿದರು.

With Best Compliments from :



Dr. Sanath S. Rao

M.B.B.S., M.D.(Derm, Vene, Lep)

Fellow Cosmetology (St. John's Hospital)

SKIN SPECIALIST & COSMETOLOGIST

Clinic : 0820-6529474

Mobile : 9886093199

drsanathrao@gmail.com

JALAJA SKIN CARE AND COSMETOLOGY CLINIC

Sai Harsha Square, Koladapete (Thenkapete), Old Post Office Road, Udupi - 576 101.

Visit us at : www.jalajaskincare.com

Timings : 9-30 a.m. to 2-00 p.m., 4-30 p.m. to 8-00 p.m.

Also available at Lalith Hospital (12-30 a.m. to 2-00 p.m.)

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ

### ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯ ಕರೆಯೋಲೆ



ಸ್ವಸ್ತಿ! ಶ್ರೀ ವಿಕಾರಿ ನಾಮ ಸಂ।ರದ

ಮೀನ ಸಂಕ್ರಮಣ ತಾ.14-03-2020ನೇ ಶನಿವಾರ

**ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯು**

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು.

ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

–ಆಡಳಿತ ಮಂಡಳಿ

ಕಾರ್ಯಕ್ರಮ : ಬೆಳಿಗ್ಗೆ ಗಂಟೆ 8-00ರಿಂದ ಗಣಹೋಮ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ, ಮಹಿಳಾ ವೇದಿಕೆಯಿಂದ ಭಜನಾ ಕಾರ್ಯಕ್ರಮ, ಪಾರಾಯಣ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ ಮತ್ತು ಅನ್ನಸಂತರ್ಪಣೆ

With Best Compliments From :

***Rajathadri Hotel Pvt. Ltd.

Lodging & Boarding



Sri Ramesh Shanubhag, Usha, Sanketh and Kavitha

Directors

OUR FACILITIES

★ A/c Rooms ★ Deluxe Rooms ★ 3, 4, 5 Cot Rooms

★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001

Ph : 02162-234017, 233818

Fax : 02162-233885 E-mail : rajathadri.satara@gmail.com

With Best Compliments From :

Land Trades™

BUILDERS & DEVELOPERS

UPGRADE TO A NEW LIFESTYLE


Premium Projects in Mangalore










9845084866, 9880742159, 9886199769

1st Floor, New Milagres Mansion, Falnir Road, Mangalore - 575001

info@landtrades.in

sales@landtrades.in

Ph: 0824 2425424

www.landtrades.in

Real Estate Developer Rating CRISIL DA3+

Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754

Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org